


# ಪಂಚದ್ರುಮ

(ಐದು ಯಕ್ಷಗಾನ ಕೃತಿಗಳು)

● ಜಿ. ಎಂ. ಭಟ್ಟ, ಕೆ. ವಿ.

ಕರ್ನಾಟಕ ಯಕ್ಷಗಾನ ಅಕಾಡೆಮಿ,
ಬೆಂಗಳೂರು

# ಪಂಚದ್ರುಮ

(ಐದು ಯಕ್ಷಗಾನ ಕೃತಿಗಳು)

- ಕೃತಿಕರ್ತರು -

**ಜಿ. ಎಂ. ಭಟ್ಟ, ಕೆ. ವಿ.**

**✆ 9480032494**

ಪ್ರಕಾಶಕರು :

**ಕರ್ನಾಟಕ ಯಕ್ಷಗಾನ ಅಕಾಡೆಮಿ**

ಕನ್ನಡ ಭವನ, 2ನೇ ಮಹಡಿ, ಜೆ. ಸಿ. ರಸ್ತೆ,

ಬೆಂಗಳೂರು – 02

ದೂರವಾಣಿ : 080 – **22113146**

Email ID : kybabangalore@gmail.com

**'Panchadruma'** a collection of five yakshagana prasangagalu Written by Shri G. M. Bhat, K.V., and Published by The Registrar, Karnataka Yakshagana Academy, Kannada Bhavana, J. C. Road, Bengaluru - 560 002.

(c) ಜಿ. ಎಂ. ಭಟ್ಟ, ಕೆ. ವಿ.

| | | |
|---|---|---|
| ಪುಟಗಳು | : | vi + ೬೬ |
| ಬೆಲೆ | : | ರೂ. ೭೦/- |
| ಮೊದಲ ಮುದ್ರಣ | : | ೨೦೧೯ |
| ಪ್ರತಿಗಳು | : | ೫೦೦ |

| | | |
|---|---|---|
| Pages | : | vi + 66 |
| Price | : | Rs. 70/- |
| First impression | : | 2019 |
| Copies | : | 500 |

– ಕೃತಿಕರ್ತರು –

**ಜಿ. ಎಂ. ಭಟ್ಟ, ಕೆ. ವಿ.**

– ಪ್ರಕಾಶಕರು –

**ಎಸ್. ಹೆಚ್. ಶಿವರುದ್ರಪ್ಪ**

ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು– 560 002

– ಮುದ್ರಕರು –

**ದಿ ಚೇತನಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಕೋ–ಆಪ್. ಸೊಸೈಟಿ ಲಿ.,**

ಸಿ. ಪಿ. ಬಜಾರ್, ಶಿರಸಿ – 581 402

✆: 08384 – 227002

# ಅಧ್ಯಕ್ಷರ ಮಾತು



ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವವು ಪ್ರಸಂಗ ಕೃತಿಗಳು. ಕನ್ನಡ ಸಾಹಿತ್ಯ ನಂದನದಲ್ಲಿ ವಿಕಸನಗೊಂಡ ವಿವಿಧ ಛಂದೋ ಕುಸುಮಗಳ ಗ್ರಂಥದಿಂದ ಸಿದ್ಧಗೊಂಡ ಅನುಪಮ ಕಾವ್ಯಗಳು ಇವು. ಅಲ್ಲಿನ ಪದ್ಯಗಳ ಚೌಕಟ್ಟಿನಲ್ಲಿಯೇ ಆಶುಸಂಭಾಷಣೆಗಳು ನಡೆಯುತ್ತವೆ. ಆಶುಸಂಭಾಷಣೆಗೆ ಸೀಮಾರೇಖೆಯನ್ನೆಳೆದು ಕಥಾಪ್ರವಾಹದ ಗತಿಯನ್ನು ನಿಯಂತ್ರಿಸುವ ಕಾರ್ಯ ಅವುಗಳದು. ಉತ್ತಮವಾದ ಪ್ರಸಂಗ ಕಾವ್ಯ ರಚನೆಯು ಕವಿಯ ಪ್ರತಿಭೆ ಪಾಂಡಿತ್ಯಗಳಿಗೆ ನಿಕಷವೆನಿಸುತ್ತದೆ. ಅಂತೆಯೇ ಉತ್ತಮವಾದ ಪ್ರಸಂಗವು ಸಾವಿರಾರು ವರ್ಷಗಳುರುಳಿದರೂ ನಿತ್ಯನೂತನವೆನಿಸುತ್ತದೆ. ಅಂಥ ಕೃತಿಗಳ ಶೋಧನೆ, ಪ್ರಕಟಣೆಗಳು ಯಕ್ಷಗಾನ ಅಕಾಡೆಮಿಯ ಅದ್ಯ ಕರ್ತವ್ಯವೆಂದು ಭಾವಿಸಲಾಗಿದೆ.


ಪ್ರಸ್ತುತ ಸಂಕಲನವು ಯಕ್ಷಗಾನದ ಸಮಕಾಲೀನ ಕವಿಗಳಲ್ಲೊಬ್ಬರಾದ ಜಿ. ಎಂ. ಭಟ್ಟ, ವಾಜಗಾರ ಅವರ ಐದು ಪ್ರಸಂಗಗಳನ್ನೊಳಗೊಂಡಿದೆ. ಅವರು ಅನೇಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರಾದರೂ ಪ್ರಕಟಿತ ಕೃತಿಗಳು ಕಡಿಮೆ. ಸುದೀರ್ಘಕಾಲದಿಂದ ಯಕ್ಷಗಾನ ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡು ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುತ್ತಿರುವ ಅವರ ಕೆಲವು ಕೃತಿಗಳನ್ನು ಪ್ರಕಟಿಸುವ ಮೂಲಕ ನಿಸ್ವಾರ್ಥ ಸೇವೆಗೆ ಗೌರವವನ್ನು ಸಲ್ಲಿಸಿದಂತೆಂದು ತಿಳಿದಿದ್ದೇವೆ.

ಈ ಕೃತಿಯ ಪ್ರಕಟಣೆಗೆ ಸರ್ವವಿಧವಾದ ಸಹಕಾರವನ್ನು ನೀಡಿದ ಆಡಳಿತಾಧಿಕಾರಿಗಳಾದ ಎಸ್. ಎಚ್. ಶಿವರುದ್ರಪ್ಪ, ಅಂದವಾಗಿ ಮುದ್ರಿಸಿದ ಚೇತನಾ ಸಹಕಾರಿ ಮುದ್ರಣಾಲಯ, ಶಿರಸಿ ಇದರ ಮುಖ್ಯ ಕಾರ್ಯನಿರ್ವಾಹಕ ಪಿ. ವಿ. ಹೆಗಡೆ, ಕಂಪ್ಲಿ ಹಾಗೂ ಸಿಬ್ಬಂದಿ ವರ್ಗದವರೆಲ್ಲರನ್ನು ಕೃತಜ್ಞತಾ ಪೂರ್ವಕವಾಗಿ ನೆನೆಯುತ್ತ ಈ ಕೃತಿಗಳು ಸಹೃದಯರಿಗೆ ಸಂತಸದಾಯಕವಾಗಲೆಂದು ಹಾರೈಸುತ್ತೇವೆ.

15–05–2019

**ಪ್ರೊ॥ ಎಂ. ಎ. ಹೆಗಡೆ**
ಅಧ್ಯಕ್ಷರು

# ಕರ್ತೃನ ಅಂತರಾಳ



ನಿತ್ಯ ಹರಿದ್ವರ್ಣ ಕಾಡಿನಿಂದ ಶೋಭಾಯಮಾನ ವಾಗಿ ಉತ್ತರ ಕನ್ನಡದ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಸರಾಂತ ಸಿದ್ದಾಪುರ ತಾಲೂಕಿನ ಹೆಗ್ಗೆ ಗ್ರಾಮದ ಕೆಳಗಿನ ವಾಜಗಾರದಲ್ಲಿ ವಾಸಿಸುವ ಚಿಕ್ಕ ಕೃಷಿಕ ಕುಟುಂಬದವನು ನಾನು. ವಾಜಗಾರ ವಾಚಕಾರ ಎಂಬುದಕ್ಕೆ ಒಂದು ಪ್ರತೀತಿ ಇದೆ. ಸಂಸ್ಥಾನಗಳ ಆಡಳಿತದ ಕಾಲದಲ್ಲಿ ಸಂಸ್ಥಾನದಲ್ಲಿ ವಾಚನ ಮಾಡುತ್ತಿದ್ದ ಕುಟುಂಬ ಎಂದು. ವಾಚನ ಕಲೆ ತನ್ನಿಂದ ತಾನೇ ನನ್ನ ಮೈಗಂಟಿ ಬಂದಿರುವುದು. ನನ್ನ ತಂದೆ ಹಾಗೂ ದೊಡ್ಡಪ್ಪಂದಿರು ಸಂಗೀತ ಹಾಗೂ ಯಕ್ಷಗಾನ ಕಲಾವಿದರಾಗಿದ್ದರು. ಕೃತಿ ಕರ್ತರಾಗಿದ್ದರು. ಇದು ಪರಂಪರೆ ಕಲೆ ಆರ್ಷೇಯತೆಯ ದ್ಯೋತಕ.

ನನ್ನ ಬದುಕೇ ವಿಚಿತ್ರವಾದ ನಡೆಯಿಂದ ಕೂಡಿರುವುದಂತೂ ಸತ್ಯ. ಗ್ರಾಮೀಣವಾಗಿ ವಿದ್ಯಾ ಸಂಸ್ಥೆಗಳ ಕೊರತೆಯ ಕಾಲ. ಬಡತನ ಈ ಸಂಯೋಗದಲ್ಲಿ ನನಗೆ ವಿದ್ಯೆಯ ಹಪಹಪಿಕೆ. ಇದು ನೇರ ದಾರಿಯನ್ನು ತಪ್ಪಿಸಿತು. ಪ್ರಾಥಮಿಕ – ಪ್ರೌಢ ಶಿಕ್ಷಣವನ್ನು ಮುಗಿಸಿದ್ದಷ್ಟೇ ಕವಲೊಡೆದ ದಾರಿಯಲ್ಲಿ ಸಾಗುವಾಗ ಹಿಂದಿ ಭಾಷೆಯಲ್ಲಿ 'ಪ್ರವೇಶಿಕಾ', ಕನ್ನಡದಲ್ಲಿ ಕಾವ – ಜಾಣ, ಸಂಸ್ಕೃತದಲ್ಲಿ ಪುಣಾ ವಿದ್ಯಾ ಪೀಠದ ಪ್ರಥಮ, ದ್ವಿತೀಯ, ತೃತೀಯ, ಕುಸುಮ ಪರೀಕ್ಷೆಗಳಲ್ಲಿ ತೇರ್ಗಡೆಯಾದೆ. ಓದು ಒಕ್ಕಾಲಾದ್ದರಿಂದ, ಮುಕ್ಕಾಲು ಬುದ್ಧಿಯಿಂದ ಲೋಕಾನುಭವ ಪಡೆದುಕೊಳ್ಳಲು ಹವಣಿಸಿದೆ. ಊರಿನ ನೌಕರಿ, ರಾಜಕೀಯ ರಂಗ, ಸಾಹಿತ್ಯ – ಯಕ್ಷಗಾನ ಕ್ಷೇತ್ರಗಳು, ಪರಿಸರ ಕ್ಷೇತ್ರ, ಆರ್. ಎಸ್. ಎಸ್. ಇತ್ಯಾದಿಗಳಲ್ಲಿ ಸೇವಾರ್ಪಣೆ ಭಾವದಿಂದ ಶ್ರಮಿಸಿ ಸಾಮಾಜಿಕ ಅನುಭವವನ್ನು ಹೆಚ್ಚಿಸಿಕೊಳ್ಳುತ್ತಿರುವುದು. ಪೂರ್ಣತೆ ಯಾವುದರಲ್ಲಿಲ್ಲದಿದ್ದರೂ ಕಂಡದ್ದನ್ನು ಕಲಿಯುವ – ಕಿಸೆ ತುಂಬಿಸಿಕೊಳ್ಳುವ ಪ್ರವೃತ್ತಿ ಮುಂದುವರಿಕೆ.

ಬಾಲ್ಯದಿಂದಲೂ ಯಕ್ಷಗಾನ, ಪರಿಸರ ಬರಹಗಳ ಹವ್ಯಾಸದಲ್ಲಿ ಪ್ರೀತಿ. ಮಾನ್ಯ ಕುವೆಂಪುರವರೆಂದ ಹಾಗೆ 'ಬರೆ ಬರೆದು ಕವಿಯಾಗು' ಬರೆಯುತ್ತ ಬಂದೆ, ಕವಿಯಾಗಲಿಲ್ಲ. ಅಂಥ ಬರಹಗಳಲ್ಲಿ ಸಾಹಿತ್ಯ ದೃಷ್ಟಿಯಿಂದ, ರುದ್ರ–ಶಕ್ತಿ, ಕಪ್ಪಿನಲಿ ಕಡತೋಕೆ, ಸಂತೆಯಲ್ಲಿ ಸಾಧನೆ, ಕವನ ಕಮಲ, ಭಾಮಿನಿ ಷಟ್ಪದಿಯಲ್ಲಿ – ಸತ್ಯನಾರಾಯಣ ವ್ರತ, ರಾಧೇಯ ರಸಾಯನ, ಸಪ್ತಶತಿ ಇವಲ್ಲದೇ ಯಕ್ಷಗಾನದಲ್ಲಿ

30–32 ಪ್ರಸಂಗ ಕೃತಿಗಳನ್ನು ರಚಿಸಿ ಇಟ್ಟಿದ್ದು ಗೆದ್ದಲು ಹಿಡಿಯುವುದಕ್ಕೆ ಅನುಕೂಲವಾಗಿದೆ. ಇಂತಹ ಸಂದಿಗ್ಧ ಸಮಯದಲ್ಲಿಯೂ ಯಕ್ಷಗಾನ ಅಕಾಡೆಮಿಯ ಪ್ರಸ್ತುತ ಅಧ್ಯಕ್ಷರಾದ ಶ್ರೀ ಎಂ. ಎ. ಹೆಗಡೆಯವರು ಒಂದು ದಿನ ನನ್ನನ್ನು ಪ್ರಶ್ನಿಸಿದರು, ಅಕಾಡೆಮಿ ಇಷ್ಟು ಹತ್ತಿರವಿದೆ. ನೀನೇಕೆ ಸುಮ್ಮನೆ ಕುಳಿತಿದ್ದಿ ಎಂದು. ಆಗ ನನಗೆ ಎಚ್ಚರಾದದ್ದು. ಅವರು ನಮ್ಮ ಹಿತೈಷಿಗಳೂ ಹೌದು. ಅವರ ಒಡನಾಟ ಬಹುಕಾಲದಿಂದ. ಇವರ ಮಾರ್ಗದರ್ಶನ, ದಿ. ಕೆರೆಮನೆ ವೆಂಕಟಾಚಲ ಭಟ್ಟರಿಂದ ಕಾಲಿಗೆ ಗೆಜ್ಜೆ, ದಿ. ನೆಬ್ಬೂರು ನಾರಾಯಣ ಭಾಗವತರಿಂದ ಭಾಗವತಿಕೆಯ ಪದ್ಧತಿ, ಯಕ್ಷ ಋಷಿ ಶ್ರೀ ಮಂಜುನಾಥ ಭಾಗವತರಿಂದ ತಾಳ ಸೂತ್ರ – ಪ್ರಸಂಗ ರಚನೆಯ ಅಧ್ಯಯನಗಳು ಕಲೋಪಾಸಕ, ಕೃತಿ – ಕರ್ತ ಎಂಬುದಕ್ಕೆ ನೀರು – ನಲುವುಗಳನ್ನು ಒದಗಿಸಿವೆ. ಇವರೆಲ್ಲರೂ ಸ್ಮರಣೀಯರು ಅಭಿನಂದನಾರ್ಹರು. ಗುರು ಸ್ವರೂಪರು, ಅವರೆಲ್ಲರ ಚರಣ ಕಮಲಗಳಿಗೆ ನನ್ನ ಹೃತ್‌ಪೂರ್ವಕ ನಮನಗಳು.

ನಾನು ಪ್ರಚಾರ ಪ್ರಿಯನಲ್ಲ. ಪ್ರಾಮಾಣಿಕವಾಗಿ ಕೃಷಿ ಮಾಡುವವನು. ಈ ಕೃಷಿ ಬೇರೆಯವರನ್ನು ಸಮಾಧಾನ ಮಾಡುವುದಕ್ಕಲ್ಲ. ನನ್ನ ಮನದಾನಂದಕ್ಕಾಗಿ ಮಾತ್ರ. ಈ ಕುಂಚೋದ್ಯೋಗ ಹಾಗಾಗಿ ಹೆಚ್ಚು ಪ್ರಕಟವಾಗಲಿಲ್ಲ. ಮುದ್ರಣಕ್ಕೆ ನನ್ನಿಂದ ಅಸಾಧ್ಯವಾದ ಪರಿಸ್ಥಿತಿಯಲ್ಲಿ ಯಕ್ಷಗಾನ ಅಕಾಡೆಮಿಯ ಮಾನ್ಯ ಅಧ್ಯಕ್ಷರು ಹಾಗೂ ಅಕಾಡೆಮಿ ನಾನು ಬರೆದ ಐದು ಪ್ರಸಂಗಗಳನ್ನು ಆಯ್ಕೆ ಮಾಡಿ, ಈ ಮಾಲಿಕೆಯಲ್ಲಿ ನನ್ನನ್ನು ಜಾಗೃತಗೊಳಿಸಿದ್ದಾರೆ. ಅವರಿಗೆ ನಾನು ಚಿರ ಋಣಿ.

ಆತ್ಮ ತತ್ವದ ವರ್ಣನೆ ಮಾಡುವುದರ ಕುರಿತಾಗಿ, "ತದೇಜತಿ ತನ್ನೈ ಜತಿ ತದ್ದೂರೇ ತದ್ವಂತಿಕೇ । ತದಂತರಸ್ಯ ಸರ್ವಸ್ಯ ತದು ಸರ್ವಸ್ಯ ಬಾಹ್ಯತಃ" ಎಂಬ ಈಶಾವಾಸ್ಯ ಉಪನಿಷದ್ ವಾಕ್ಯದ ಪ್ರಕಾರ, ಸಮಾಜ ಹೃದಯದ ಒಳಗೂ ಹೊರಗೂ ಇರಬೇಕೆಂಬ ಅಪೇಕ್ಷೆ ನನ್ನದು. ಪ್ರಾಂಜಲ, ಪ್ರೀತಿ –ವಿಶ್ವಾಸಗಳು ನನ್ನನ್ನು ಬೆಳೆಸಿವೆ, ಬದುಕಿಸಿವೆ. ಆ ಎಲ್ಲದಕ್ಕೆ ಪಾತ್ರರಾದವರ ಪಾದಯುಗ್ಮಗಳಿಗೆ ವಂದಿಸಿ, ಈ ಐದು ಪ್ರಸಂಗ ಕೃತಿ "ಪಂಚದ್ರುಮ" ವನ್ನು ಅಂದವಾಗಿ ಮುದ್ರಿಸಿದ ಶಿರಸಿಯ ಚೇತನಾ ಸಹಕಾರಿ ಮುದ್ರಣಾಲಯದ ಮುಖ್ಯ ಕಾರ್ಯನಿರ್ವಾಹಕ ಶ್ರೀ ಪಿ. ವಿ. ಹೆಗಡೆ, ಕಂಪ್ಲಿ ಹಾಗೂ ಅವರ ಸಿಬ್ಬಂದಿವರ್ಗಕ್ಕೆ, ಸಹಕರಿಸಿದ ಹಿರಿಯರು, ಗೆಳೆಯರಿಗೆ, ಪ್ರಕಾಶನಗೊಳಿಸಿದ ಬಂಧುಗಳಿಗೆ, ಮುನ್ನುಡಿ ಕರ್ತರಿಗೆ ಮಗುದೊಮ್ಮೆ ಹೃದಿಪೂರ್ವಕ ಅಭಿವಂದನೆಗಳನ್ನು ಸಲ್ಲಿಸಿ, ಅಂತರ್ಯದ ನುಡಿಗೆ ವಿರಾಮ.

"ಯಕ್ಷಗಾನಂ ಗೆಲ್ಗೆ"

– ಜಿ. ಎಂ. ಭಟ್ಟ, ಕೆ. ವಿ.

## ಒಳಗೇನ ಬಲ್ಲಿರಿ?.......

1. ಊರ್ವಶಿ ಜನನ / 1

2. ಅಣಿಮಾಂಡವ್ಯ / 5

3. ಮಾರ್ಕಂಡೇಯ ಚರಿತ್ರೆ / 15

4. ವಾಲೀವಿಜಯ / 27

5. ಸಮಗ್ರದೂರ್ವಾಸ / 47

# ಊರ್ವಶೀ ಜನನ

– ಕೃತಿಕರ್ತರು –

ಜಿ. ಎಂ. ಭಟ್ಟ, ಕೆ. ವಿ.

# ಊರ್ವಶೀ ಜನನ

ಪಾತ್ರ ವರ್ಗ – ಚಿಣ್ಣರ ಬಗ್ಗಾಗಿ

೧) ಧರ್ಮ
೨) ನರ
೩) ನಾರಾಯಣ
೪) ದೇವೇಂದ್ರ
೫) ಊರ್ವಶಿ
೬) ಅಪ್ಸರೆಯರು

**ಭಾಮಿನಿ –**

ದಕ್ಷಿಣಾ ಮೂರುತಿಯ ಕುವರನ । ಇಕ್ಷುಚಾಪನ ಪಿತನ ಗುರುವರ । ದಕ್ಷ ವೈರಿಯ ಗಿರಿಜೆ ಶಾರದೆ ಲಕ್ಷ್ಮಿಯರ ಭಜಿಸಿ ॥ ೧/೨ ॥

**ಝುಂಪೆತಾಳ –**

ಒಂದು ದಿನ ಮಹ ಧರ್ಮನೆಂದೆಂಬ ಮುನಿ ಮೌಳಿ । ಬಂದು ಕುಶದಾಸನದಿ ಮುದದಿ ॥ ಮಂಡಿಸಿರೆ ಶುದ್ಧಾತ್ಮರಾದವನ ಸುತರಿಬ್ಬ । ರೊಂದಿಸಿದರವನೆರಡು ಪದದಿ ॥ ೧ ॥

**ಮಾರವಿ – ಏಕತಾಳ**

ಜನಕನೆ ನಿನ್ನಲಿ ಅಭಯುವ ಕೊಳ್ಳುತ । ವನಕತಿ ಹರುಷದೊಳು ॥ ದಿನಮಣಿಯುದಯದಿ ತೆರಳಲು ತಪಸಿಗೆ । ಮಣಿದಿಹೆವೈ ಕೇಳು ॥ ೨ ॥

**ಅಷ್ಟ ತಾಳ –**

ತರಳರೆ ನೀವೆಂದ ನುಡಿಕೇಳಿ ಮುದವಾಂತೆ ಪೊರಡಿರಿ ತಪಕೆಯೀಗ ॥ ಹರಸಿದೆ ನೀವಲ್ಲಿ ವರ ಸಮಾಧಿಯೊಳಿರ್ದು । ಹರಿ ಸುರಾದ್ಯರನೊಲಿಸಿ ಬೇಗ ॥ ೩ ॥

**ಭಾಮಿನಿ –**

ಪಿತನೊಳಭಯವಗೊಂಡು ಹರಿಬದ । ಗತಿಯೊಳಗೆ ವನ ಸೇರ್ದು ಬದರಿಕ । ಕ್ಷಿತಿಯ ಸನಿಹದೊಳುಗ್ರ ತಪಗಳ । ನೆಸಗಿ ದಿನಗಳೆಯೆ ॥ ೧/೨ ॥

**ಸೌರಾಷ್ಟ್ರ – ತಿವುಡೆ –**

ಅಮರಗಣ ತಾ ನಡುಗೆ ತಪಸಿಗೆ । ಅಮರಪತಿ ಚಿತ್ತದಲಿ ಶಂಕಿಸಿ । ಗಮಿಸಿದನು ಮುನಿಸಿನಲಿ ಬದರಿಕಾ । ಶ್ರಮದ ನೆಲಕೆ ॥ ೪ ೧/೨ ॥

ಭಯದಿ ಧ್ಯಾನಾಸಕ್ತರಾಗಿಹ । ಸುಯತಿವರರಿಗೆ ಪೇಳ್ದ ತಪದೊಳು । ಜಯಿಸಿದಿರಿ ದೇವರ್ಕಳೆಲ್ಲರ । ಜಯತು ಕೇಳಿ ॥ ೫ ॥

ಹಿತದಿ ನುತಿಸಲು ಏಳದಿರೆ ಸುರ । ಪತಿಯು ಸುರಿಸಿದ ಶಿಲೆಯ ಮಳೆಗಳ । ಅತಿ ವಿಷದ ಸರ್ಪಗಳ ಚೇಳುಗಳು । ವ್ರತವ ಕೆಡಿಸೆ ॥ ೬ ೧/೨ ॥

**ವಾರ್ಧಿಕ –**

ಎಚ್ಚರಂಗೊಳದಿರಲು ಇಂದ್ರ ಮನದೊಳು ನಾಚಿ । ಇಚ್ಛೆಯೊಳು ಪುರ ಸಾರ್ದು ಸಾವಿರಪ್ಸರೆಯರನು । ಕೆಚ್ಚೆದೆಯ ವಾದ್ಯ ಭಟರೈವತ್ತು ಮಂದಿಗಳ । ತಟ್ಟನವನಟ್ಟಿ ಬರಲು ॥ ೧/೨ =೭ ॥

**ಆದಿತಾಳ –**

ನೃತ್ಯ ವಾದ್ಯದ ರಭಸಕೆ । ನರ– ನಾರಾಯಣರೆ । ಚ್ಚೆತ್ತು ನೋಡುತಿಹ ಭರಕೆ ॥ ಪೃಥ್ವಿಯಳುಕಿತು ನಿಮ್ಮ ನೃತ್ಯದುದ್ದೇಶವ । ಮತ್ತೆ ಅರಿತಿಹೆವೀಗ । ಸ್ವಸ್ಥದಿ ತೆರಳಬೇಕು ॥ ೮ ॥

ನಿಲಲುಗರ್ವದೊಳಪ್ಸರರು । ನಾರಾಯಣನು ತಾ । ತಿಳಿದು ತಟ್ಟಿದ ತನ್ನೂರು ॥ ಜಲಜಾಕ್ಷಿಯೋರ್ವಳು ಫಳಿಲನೆ ಜನಿಸಿದ । ರೊಳವನು ತಿಳಿಯುತ । ಸುದತಿಯರ್ ನಾಚಲು ॥ ೯ ॥

**ಸಾಂಗತ್ಯ – ರೂಪಕ –**

ನರನೆಂದ ನೂರುವಿನೊಳ್ ಜನಿಸಿದ ತರಳೆಗೆ । ಊರ್ವಶೀ ಎಂದೆಂಬ ಪೆಸರು ॥ ಸುರಪತಿಗಿವಳನು ಕಾಣಿಕೆಯೆನೆ ನೀಡಿ । ಪರಮ ಅಪ್ಸರೆಯಾಗಿ ಸಲಲು ॥ ೧೦ ॥

ಎನೆ ಕೇಳಿ ಗಣಿಕೆಯರ್ ಕ್ಷಮೆ ಕೋರಿ ಯುರ್ವಶೀ । ವನಿತೆ ಸಹಿತೆಲ್ಲರೂ ಮಣಿದು ॥ ಮನ ವೇಗದೊಳು ನಾಕ ಪುರಕೈದ ಲಿತ್ತಲು । ಮುನಿಗಳು ಶುಭವ ಕೋರಿದರು ॥ ೧೧ ॥

**ಮಾರವಿ – ಏಕತಾಳ**

ಅನಿಮಿಷರೊಡೆಯನು ವಿಜಯವ ತಂದಿಹ । ಗಣಿಕಾಂಗನೆಯರನು । ಘನ ವೇಗದಿ ಕರೆಸುತ ಕೇಳ್ದನು ನರ । ಮುನಿಗಳ ವಾರ್ತೆಯನು ॥ ೧೨ ॥
ತೋರಿದರವರೂರ್ವಶಿಯನು ನಾಚುತ । ಕಾರಣ ತಿಳಿಸಿದರು ॥ ಧಾರಿಣಿಯಲಿ ಅಜನೋಪಾಧಿಯ ನೆರೆ । ವೇರಿಸಲವರ್ಯಾರು ॥ ೧೩ ॥
ಹರಿ ಕಮಲಜ ಭೃಗು ಋಷಿಗಳಿಗಿದೆ । ಪರಿ । ಹರ ಕೊರೆಯುತಲಿ ದಿಟ ॥ ಎರಡನೆ ಕುಲದಲಿ ಪುನರಪಿ ಜನ್ಮವು । ಬರಲೆನೆ ಪೊರವಂಟ ॥ ೧೪ ॥

**ಏಕತಾಳ –**

ಗಜಮುಖ ಗಣಪನೇ । ಭುಜಗ ಭೂಷಣನೇ ।
ಸುಜನೋದ್ಧಾರಕನೇ । ಭಜಕರ ವಂದ್ಯನೇ
ಮಂಗಳಂ – ಶುಭ ಮಂಗಳಂ

"ಗಮಕ"

# ಅಣಿಮಾಂಡವ್ಯ

– ಕೃತಿಕರ್ತರು –
ಜಿ. ಎಂ. ಭಟ್ಟ ಕೆ. ವಿ.

# ಅಣಿಮಾಂಡವ್ಯ

ಪಾತ್ರ ವರ್ಗ –

೧) ಅಣಿಮಾಂಡವ್ಯ – ಓರ್ವ ಮಹರ್ಷಿ

೨) ಅನೀತ – ಅರಸ

೩) ಯಮ – ಶೈಮಿನಿ ಒಡೆಯ

೪) ಗುಪ್ತಶೀಲೆ – ತರುಣಿ

೫) ಚಾರಕ – ಅನೀತನ ಚಾರ

೬) ಕಳ್ಳರು – ಇಬ್ಬರು

೭) ರಾಜಭಟರು – ಇಬ್ಬರು

೮) ಯಮದೂತರು – ಇಬ್ಬರು

೯) ಮಂತ್ರಿ

## ನಾಟಿ – ಝಂಪೆತಾಳ

ಸ್ವಚ್ಛ–ನಿರ್ಮಲ ಮನದಿ ವಿಘ್ನ ಶೋಕಗಳೆಂಬ । ಕಿಚ್ಚುಗಳಿಗೀಶ ಗಣಪತಿಯೆ ॥ ಅಚ್ಛೋದ ಜಾತ ಪದಯುಗ್ಮಗಳ ಭಜಿಸಿ ವಿಧಿ । ಕಚ್ಛಪೀ ಧರೆ ಶಂಭು ಉಮೆಯ ॥ ೧ ॥

ಶಂಖ ಚಕ್ರವು ಗದೆಯು ಮತ್ತೆ ಕರದಲಿ ಮುಗುಳ । ಪಂಕಜವ ಪಿಡಿದ ಮಾಧವನ ॥ ಕುಂಕುಮಾಂಕಿತೆ ಕವಿಯ ವೃಂದ ಪದ ಜಲಜಗಳಿ । ಗೋಂಕಾರ ಯುಕ್ತ ನಮನ ॥ ೨ ॥

## ಸೌರಾಷ್ಟ್ರ – ತ್ರಿವುಡೆ

ಇತ್ತಲೊಂದಿನ ನೃಪನನೀತಿಯು । ಸುತ್ತ ಪರಿಜನವೆರಸಿ ಸಭೆಯನು । ಇತ್ತು

ವಿಷ್ಟರವೇರಿ ಸ್ವಾಗತ । ವಿತ್ತು ಮುದದಿ ॥ ೩ ॥
ಮನ್ನಿಸುತ ಧಾತ್ರೀಶರೆಲ್ಲರ । ಸನ್ನುತಿಪ ವೇಳೆಯಲಿ ಬರೆ ಚರ । ನನ್ನು ಕಾಣುತಲೆಂದನೇನಿದು । ನಿನ್ನ ವಾರ್ತೆ ॥ ೪ ॥

**ಏಕತಾಳ –**

ದೊರೆರಾಯ ಲಾಲಿಸೋ ಪ್ರಲಾಪ । ಸೋಜಿಗವೇನೆಂಬೆ । ದೊರೆರಾಯ ಕೇಳು ವಿಲಾಪ ॥ ದೊರೆಯ ಧರ್ಮ ರಾಷ್ಟ್ರದಲ್ಲಿ । ಬರಗಾಲವದರ ಭೀತಿ । ಬರಿಯ ಸುಲಿಗೆ ಕೊಲೆಯು ಮತ್ತೆ ಇರಲು ಸ್ತೇಯ ಹೆಚ್ಚಾಗೈತಿ ॥ ೫ ॥
ಉಗ್ರಗಾಮಿಗಳೆಲ್ಲ ಜನರ । ವ್ಯಗ್ರವಾಗಿ ಬೆದರಿಪರತಿ । ಶೀಘ್ರದಿಂದಲದರ ನೀವು ನಿಗ್ರಹಿಸಲು ತಂದೆ ವಾರ್ತೆ ॥ ೬ ॥

**ಮಾರವಿ – ಏಕತಾಳ –**

ಕಾವಲು ಭಟನವನೆಂದುದ ಕೇಳುತ । ಭೂವರಸಲೆ ಕನಲ್ದು ॥ ಈ ವಿಧ ಕಷ್ಟವ ನೆಸಗುವ ಕಳ್ಳರ । ಸೋವರಿಯಲು ಬಗೆದು ॥ ೭ ॥

**ಅಷ್ಟತಾಳ –**

ಮಂತ್ರೀ ಮಹೋದಯರೇ । ಸ್ತೇಯವ ಮಾಳ್ಪ । ತಂತ್ರೀಗಳನು ಶೋಧಿಪರೇ ॥ ಯಂತ್ರದಂತೆ ಕಾರ್ಯಗಳನು । ನಿರ್ವಹಿಸುವರೇ ರಾಜ । ತಾಂತ್ರಿಕ ಭಟರ ಜವದೊಳಿಂತು । ಹೇಗೆ ಕಳುಹಿಸಿದರೇ ॥ ೮ ॥

**ಅಷ್ಟ ತಾಳ –**

ಒಳಿತು ನಿನ್ನಯ ಮಾತು । ಕಳುಹಿಸು ಭಟರನ್ನು । ಘಳಿಲನೇ ಅನ್ವೇಷಣೆಗೆ ॥ ಸಲಿಸಬೇಕವರಿಂಗೆ । ಬಲವಾದ ಶಿಕ್ಷೆಯ । ಕೆಲ–ದೌಷ್ಟ್ಯ ನಿಯಂತ್ರಣಕೆ ॥ ೯ ॥

**ಮಾರವಿ – ಏಕತಾಳ –**

ಕಳುವರ ವಸ್ತುವನಿರಿಸಿಕೊಂಡಿರುವರ । ಎಳೆತರುತಲಿಕವರೆ ॥ ಸುಲಭದಿ ಶೂಲಕೆಯೇರಿಸುವರೆ ನೃಪ । ಕುಲಕಿಹ ಡಂಗುರವ ॥ ೧೦ ॥
ಹೊಡೆಸಿರಿ ನೀವೀ ರಾಜ್ಯದೊಳೀಕ್ಷಣ । ಒಡನೆಯೆ ಚರ ಮುಖದಿ ॥ ಕಡುತಮ

ದುಷ್ಟರ । ಹನನವ ಮಾಣ್ಪರೇ । ಬದುಕಲಿ ಪ್ರಜೆ ಮುದದಿ ॥ ೧೧ ॥

**ಭಾಮಿನಿ–**

ಡಂಗುರವ ಸಚಿವೇಂದ್ರ ಮುಖದಲಿ । ಕಂಗೊಳಿಪ ರಾಜ್ಯದಲಿ ಹೊಯ್ಸಿರ್ಶೈ ಭಂಗವಾಯಿತು ಕಳಲು ಪ್ರಜೆಗಳ । ಸುಲಿಯೆ ನೀಚರಿಗೆ ॥ ಸಂಗಡವೇ ಬೇಹುಗರು ಚರಿಸುವ । ಸಂಘಟನೆಯರಿತಾಗ ಕಳ್ಳರು । ಎಂಗಡಿಸುತಲ್ಲಲ್ಲಿಗವಿತರು । ಕಾಣದಂದದಲಿ ॥ ೧೨ ॥

**ಕೇದಾರ ಗೌಳ – ಝಂಪೆತಾಳ –**

ಇತ್ತಲಾ ಮಾಂಡವ್ಯನು । ಓರ್ವ ಋಷಿ । ಪುತ್ರ ಬೆಳೆಯುತಲಿರ್ದನು ॥ ನಿತ್ಯದವನಾಶ್ರಮದೊಳು । ಮಕ್ಷಿಕವ । ಕತ್ತರೆದು ಕೊಲ್ಲುತಿರಲು ॥ ೧೩ ॥ ತಂದೆ – ತಾಯ್ಗಳು ನೋಡುತ । ಮಮತೆ ಮಗ । ನೆಂದು ಮೌನವ ತಾಳುತ ॥ ಅಂದಿರಲು ಯತಿಜಾತಗೆ ॥ ತಾರುಣ್ಯ । ಬಂದಿರಲಿಕ್ಕೈದ ತಪಕೆ ॥ ೧೪ ॥

**ಮಧು ಮಾಧವಿ– ತ್ರಿವುಡೆ ತಾಳ –**

ಬರ ಬರುತಲಿನೀತನಾಖ್ಯನ । ಧರೆಯ ತಲದೊಳನೀತಿ ತುಂಬಿತು । ಭರದಿ ಮುತ್ತಿರೆ ತುಡುಗರೊಂದಿನ । ಧರಣಿಯಮರರ ಕೇರಿಗೆ । ನಿಶಿಯೊಳಿಂತು ॥ ೧೫ ॥

**ಏಕತಾಳ–**

ಅಯ್ಯೋ ಅಯ್ಯಯ್ಯೋ ಕಳ್ಳರು । ಮುತ್ತಿವರ್‍ಗೃಹಕೆ । ಕಯ್ಯೊಳಗಿಹ ದಂಡದೊಳವರು । ಹೊಯ್ದರೆನ್ನನು ಬೇಗ । ಬನ್ನಿರೆಂದೆನುವ ಕೂಗ । ಹೊಯ್ಯುತಲಿರಲು ಕಂಡು । ಜವದೊಳಲ್ಲಿಗೆ ಬಂದರು ॥ ೧೬ ॥ ಓಡುತ್ತಲಿಹರು ಕಳ್ಳರು । ಧಾವಿಸಿ ಭಟರು । ನೋಡುತಲವರ ಬೆನ್ನಟ್ಟಿದರು ॥ ಗೂಢದೊಳ್ತಪವನು । ಮಾಡುತಲಿಹ ಮುನಿ । ಮಾಂಡವ್ಯನ ಎಲೆ । ಗೂಡಿನೊಳವಿತರು ॥ ೧೭ ॥

**ದ್ವಿಪದಿ –**

ವರ ಸಮಾಧಿಯೊಳಿರ್ದು । ಎಚ್ಚರಂಗೊಳಲು ॥ ಅರಿತು ಮನದೊಳಗವನು । ಅವಿತಿರುವ ಹೊಳಲು ॥ ೧೮ ॥ ಮೌನದೊಳಗಿಹ ಸಮಯ । ರಾಜನಾ ಭಟರು ॥

ಕಾಣಿಸಲು ಕೈದುಗಳ । ಜಾಡ ಕೇಳಿದರು ॥ ೧೯ ॥ ಪೇಳದಿರೆ ಮುನಿಸಹಿತ । ಅವಿತ ಕಳ್ಳರನು ॥ ಶೂಲಕೇರಿಸೆ ತರಲು । ಅರಸನನೀತನು ॥ ೨೦ ॥

**ಘಂಟಾರವ –ಅಷ್ಟತಾಳ –**

ಆಣತಿಯನು ಮಾಡಿದ । ಆಕ್ಷಣ ಶೂಲ । ದೇಣಿಗೇರಿಸೆ ಸಾರಿದ ॥ ಕ್ಷೋಣಿಪನ ಆಜ್ಞೆಯೊಳು ಕಟುಕರು । ಮೌನವಾಂತಿಹ ಮುನಿಯ ತುಡುಗರ । ಆನುವೊಡೆ ಸಿಲುಬೆಯನು ಸಿಕ್ಕಿಸಿ । ಹಾನಿಯಾಗಿಸಲವರ ಜೀವವ ॥ ೨೧ ॥ ಶೂಲ ಸ್ಥಾನದಿ ಕಾವಲು । ದೂತರುಯಿದ್ದು । ಪಾಲಿಸೆರಡೂ ದಿನದಲು ॥ ಕಾಲಕಾಲಕೆ ವೊದಗುತಿಹಪರಿ । ಜಾಲವನು ಈಕ್ಷಿಸುತ ಧಾವಿಸಿ । ಭೂಲಲಾಮಗೆ ವಾರ್ತೆಯನು ಚರ । ಪೇಳಬೇಕೆನಲ್ಯೆದ ಭವನಕೆ ॥ ೨೨ ॥

**ರೂಪಕತಾಳ –**

ವಧೆಯ ತಾಣದಿ ಭದ್ರ । ಬಿಗಿಗಾವಲಿರಿಸಿರಲು । ಒದರುತಲಿಹರು ನೋವಿನಲಿ ॥ ವಿಧಿಯ ಕೈ ಬರೆಹವು । ಬಿಡುವುದೇ ಋಷಿಗಳನೂ । ಪದುಮ ಜಾತನೇ ಬಲ್ಲನಲ್ಲ ॥ ೨೩ ॥

ಪೋಗದುಳಿಯದೆ ಜೀವ । ಸಾಗಿ ಶೈಮಿನಿಗೊಮ್ಮೆ । ಆಗಮಿಪುದು ಮೃತ್ಯು ಜಗಕೆ ॥ ಈಗಲಾಗಲೋ ಮರಣ । ಸಾವಿನಂಚಿಗೆ ನಿಂತು । ಕೂಗಿ ರೋದಿಸುತಿರ್ದರದಕೆ ॥ ೨೪ ॥

**ಕೇದಾರಗೌಳ – ಝಂಪೆತಾಳ –**

ಕೇಳುವವರಿಲ್ಲ ಅಳಲ ॥ ತಾಪವನು । ತಾಳಲಾರದೆ ದೃಗುಜಲ ॥ ಮೇಲೆದ್ದು ರುಧಿರ ತೋಯ । ಮುಚ್ಚಿತದು । ಕಾಲನಾ ಶೂಲದಾಯ ॥ ೨೫ ॥ ಆಸಮಯದೊಳಗೋರ್ವಳು । ದುರ್ಗುಣ ಸು । ವಾಸಿನಿಯು ಬಂದರವಳು ॥ ವಾಸರದಿ ತಲೆಯ ಮೇಲೆ । ಭ್ರಷ್ಟ ಪತಿ । ಯಾಸರದಿ ಗೂಡಿನೊಳಗೆ ॥ ೨೬ ॥

**ಮಧುಮಾಧವಿ – ತ್ರಿವುಡೆತಾಳ –**

ಭಂಡನಾದನು ಗುಣದೊಳೆನ್ನಯ । ಗಂಡನೀತನು ದಿನವೂ ವೇಶ್ಯೆಯ । ಕಂಡು ಭೋಗದಿ ತೃಪ್ತಿ ಪಡುತಿರೆ । ಉಂಡು ಮಲಗದ ವ್ಯಸನಿ । ಗಂಡುಸಿವನು ॥ ೨೭॥

ಪತಿಯ ಮಾನಸದಿರವ ತಿಳಿದುರೆ । ವ್ಯಥಿಸದಂದದಿ ಜೀವಿಸಲು ಸಹ । ಪತಿ – ವ್ರತೆಗೆ ಸಮವೆಂದು ಭಾವಿಸಿ । ಹಿತದೊಳನುಕರಿಸುತ್ತಲಿ । ಸತಿಯೊಳಿಹೆನು ॥ ೨೮ ॥

ಅದಕೆ ಕರೆತಂದಿಹೆನು ಯಿವರನು । ಮುದದಿ ವೇಶ್ಯೆಯ ಗೃಹಕೆ ಕಳಿಸುವ । ಬದುಕು ನಿತ್ಯದೊಳಿಹುದು ಸೇವೆಯ ವದಗಿಸಲು ಬಂದಿರುವೆನು । ಸುದತಿ – ನಾನು ॥ ೨೯ ॥

## ಸೌರಾಷ್ಟ್ರ –ತ್ರಿವುಡೆ –

ನಾರಿ ಕಾಂತನ ಹೊತ್ತು ಸಾಗುವ । ದಾರಿಯಂಚಿನ ಶೂಲದೊಳಗಿಹ । ಪಾರಮಾರ್ಥಿಕ ಋಷಿಯು ನರಳುತ । ಚೀರುತಿರಲು ॥ ೩೦ ॥ ಗೂಡಿನೊಳಗಿಹ ಕಾಮಿನಿಯ ಪತಿ । ಪಾದ ಶೂಲದ ಮುನಿಗೆ ಸೋಂಕಲು । ವೇದನೆಯ ತಾ ತಾಳಲಾರದೆ । ರೋದಿಸಿದನು ॥ ೩೧ ॥

## ಮಟ್ಟೆತಾಳ –

ಯಾರು ನೀನು । ರಾತ್ರಿಯಲ್ಲಿ । ಪೋರನೋರ್ವನು ॥ ನಾರಿ ಶಿರದ ಮೇಲೆ ಕುಳಿತು । ದೂರ ಪೋಪನು ॥ ೩೨ ॥

## ಅಷ್ಟತಾಳ –

ಋಷಿ ಮೌಳಿ ಕೇಳಯ್ಯ । ವನಿತೆ ನಾನಿಹೆಯೆನ್ನ । ಪೆಸರದು ಗುಪ್ತಶೀಲೆ ॥ ಪಿಸುಣನೆನ್ನಯ ರಮಣ । ವೇಶ್ಯಾಗೃಹಕೆ ನಿತ್ಯ । ವಸತಿಗೆ ಬಿಡುವ ಬಾಲೆ ॥ ೩೩ ॥

## ಭಾಮಿನಿ –

ಕೈಪಿಡಿದ ವಲ್ಲಭನು ವೇಶ್ಯೆಯೊ । ಳಾಪುದನು ನೀನೆಂತು ಸಹಿಸುವೆ । ಪಾಪಿ ನಾರೀ ಕುಲಕೆ ನೀನವಮಾನವನು ಗೈದೆ ॥ ಗೌಪ್ಯಶೀಲಳು ನೀನು ತಿಳಿದೆನು । ಈ ಪರಿಯೊಳಾಗಿರುವ ವೇಳ್ಯದಿ । ವೈಪರೀತ್ಯವ ನಡೆಸಿ ಸಾಗುವೆಯೇನು ನಿರ್ದಯವೇ ॥ ೩೪ ॥

### ಸೌರಾಷ್ಟ್ರ – ತ್ರಿವುಡೆತಾಳ –

ಯೆನುತ ಕ್ರೋಧವನಾಂತು ಮುನಿಪತಿ । ಘನತರದ ಮಂತ್ರಾದಿ ಬಲದಲಿ । ಕಿನಿಸಿ ನಿಂ ಸಿಲುಬೆಯನು ಮುರಿಯುತೆ । ವನಿತೆಗೆಂದ ॥ ೩೫ ॥ ನೇಸರನು ತಾ ಮೂಡುವುದರೊಳು । ಹೇಸದಬಲೆಯೆ ನೀನು ಸಾಯುವೆ । ವಾಸಿಯಾಗದೆ ರುಜಿನ ಗಂಡಗೆ । ತಾ ಸಾಯಲಿ ॥ ೩೬ ॥

### ರೂಪಕತಾಳ –

ಶಾಪವೀಯುತ ಶೂಲ ಕಾಪ್ಪ ಕೈಯೊಳಗಿರಿಸಿ । ಪೋಪ ಮುನಿಯನು ಕಂಡು ನಾರೀ ॥ ಹೇ ಪರಮ ತಪನಿಧಿಯೆ ಕಾರುಣ್ಯ ಸಿಂಧುವೆನೆ । ತಾ ಪೇಳಿದಳು ಬಳಿಗೆ ಸಾರಿ ॥ ೩೭ ॥ ಕೇಳದೆಯೆ ಖತಿಯಾಂತು ನಿಂದಿರುವ ಮುನಿ ಕಂಡು । ಬಾಲೆ ಸಾಗಿದಳುಚ್ಚುಗಕ್ಕೆ ॥ ಭೂಲಲಾಮನ ಚಾರರಿಂಗದ ಪೇಳುತ್ತ । ಶೂಲವನು ಪಿಡಿದೈದ ತಪಕೆ ॥ ೩೮ ॥

### ವಾರ್ಧಿಕ್ಯ –

ಪೋಗಿ ದೂತರು ನೃಪಗೆ । ಆಗ ನಡೆದುದನರುಹೆ । ಸಾಗಿರುವ ಕಾಮಿನಿಯು । ತಾ ಗೃಹಕೆ ಐತರುವ । ಹಾಗೆಯೇ ದಾರಿಯಲಿ । ಕೈಗಳನು ಮುಗಿದು ಮೃತಿ । ಯಾಗೆ ತಾ ಕಾಪುರುಷನು ॥ ಭೋಗದತಿ ಯಿಂ ಬರುವ । ರೋಗದೊಳು ಸತ್ತ ಮಿಗೆ । ಯೋಗಿಯನು ಕಾಡಿರುವ । ಆಗಯಾಳಿರು ಶೂಲ । ತಾಗಿಯದರೊಳು ಮರಣ । ವಾಗಿರಲಿಕಾ ಮುನಿಯು । ತ್ಯಾಗ ಮಾಡಿದ ದೇಹವ ॥ ೩೯ ॥

### ಅಷ್ಟತಾಳ –

ಕಾಮ ದೇಗುಲವನೆಂದು । ಬಿಡಲಾಕ್ಷಣ । ಶೈಮಿನಿ ಭಟರು ಬಂದು ॥ ಆ ಮುನಿ ದೇಹವ । ಕೊಂಡೊಯ್ಯಲಾರ್ಭಟ । ಈ ಮಹಿಯೊಳು ಗೈದರು ॥ ೪೦ ॥ ಓ ಯೆಂದು ಯಮಪಾಶವ । ಕಂಠಕೆ ಸುತ್ತಿ । ಸಾಯಕ ಝುಳಪಿಸುವ ॥ ಆಯಮಭಟ ರಾಗ । ಲಾ ಯತಿಯನು ಒಯ್ದು । ಸಾಯದ ನರಕದಲಿ ॥ ೪೧ ॥ ಹಾಕಲಾ ಮುನಿ ಪುಂಗವ । ಕೂಗಿದನತಿ । ರೇಕದಿ ಯಮ ಬರುವ ॥ ನಾಕ ವೈರಿಯು । ತನ್ನ । ನಾಕದೊಳು ಕೂಗ । ತಾ ಕೇಳುತೊಡ್ಡೋಲಗವ ॥ ೪೨ ॥

**ಸೌರಾಷ್ಟ್ರ – ತ್ರಿವುಡೆತಾಳ –**

ಇತ್ತ ಜೈಮಿನಿಯೊಳಗೆ ಅರ್ಕಜ । ನಿತ್ತ ಸಭೆಯನು ಚಿತ್ರಗುಪ್ತರ । ಒತ್ತಿನಲಿ ಬಳಿಕಂದು ಕರೆಸಿದ । ನರ್ತಕಿಯರ ॥ ೪೩ ॥ ನಾಚಿನಲಿ ತಲೆದೂಗುತಿರಲಾ । ನಾಚಿಕೆಯ ವೈಯಾರದಲಿ ಮಿಗೆ । ನಾಚುಗಾರ್ತಿಯರಾಗ ಕುಣಿದರು । ಕೈಚಳಕದಿ ॥ ೪೪ ॥

**ಝಂಪೆತಾಳ –**

ಅದರುತಿದೆ ಬಿಡದಕ್ಷಿ ಅಪಶಕುನವೆಂಬ ತೆರ । ಹೃದಯ ನಡುಗಿತು ಏಕೆ ಮಾಯೆ॥ ಅದುವೆ ಮಮ ನಾರಕದ । ಸದನ ವಾರ್ತೆಯನಿಂದು । ವದಗಿಸುವರಾರೆಂದು ತಿಳಿಯೆ ॥ ೪೫ ॥

**ಮಾರವಿ ಏಕತಾಳ –**

ಘುಡು ಘುಡಿಸುತಲಾ ಪ್ರಳಯದ ಮೃದತೆರ । ಖಡುಗವ ಝಳಪಿಸುತ ॥ ಪಿಡಿದೆಳೆಯುತ ಕಡು ಪಾಪಿಗಳೆಲ್ಲರ । ಒಡೆಯಾಣತಿ ಯೆನುತ ॥ ೪೬ ॥ ಪಾಪಿಗಳೆಲ್ಲರಾ । ಟೋಪವನಿಳಿಸುತ । ಕೋಪದಿಯೆಳೆತಂದು ॥ ತಾಪಜನಿದಿರೊಳ । ಗಾ ಫಣಿ ಪಾಶವಿ । ಭಾಪೆನುತಲಿನಿಂದು ॥ ೪೭ ॥

**ಏಕತಾಳ –**

ಅಣಿ ಮಾಂಡವ್ಯನು । ವಿನಯದೊಳೆರಗಿ ॥ ದಣಿಯ ಸನ್ನಿಧಿಯೊಳು ಕೇಳ್ದನು ಬಾಗಿ ॥ ೪೮ ॥ ಎನಗೆ ನರಕದೊಳೇಕೆ । ವಸತಿಯು ಪ್ರಾಪ್ತ ॥ ಘನ ಮಹಿಮನೆ ಪೇಳು । ಜಾತಕಮಲಾಪ್ತ ॥ ೪೯ ॥

**ಅಷ್ಟತಾಳ –**

ಏನ ಪೇಳಿದೆ ತಪೋಧನನೇ । ಬಾಲ್ಯದಿ ಬಹಳ । ಹಾನಿ ಮಾಡಿದೆ ಮಕ್ಷಕಂಗಳನೆ ॥ ಮಾನವರೊಳು ಬ್ರಹ್ಮ । ನಾನ್ವಯದೊಳು ಜನ್ಮ । ನೀನೆತ್ತಿ ಹಿಂಸೆಯ । ಸಾನುರಾಗದೊಳೆನೆ ॥ ೫೦ ॥

**ಏಕತಾಳ –**

ಬಾಲಾಪ್ಯದೊಳು ಗೈದ । ಹಿಂಸೆಯ ಪಾಪ ॥ ಪಾಲಕರ ಸೇರ್ದುದು । ನೀನೇಕೆ ಕೋಪ ॥ ತಾಳಿ ತಾ ಧರ್ಮವ । ಮೀರಿದೆ ಭೂಪ । ಪೇಳ್ವುದು ಶಾಸ್ತ್ರವ । ನೀ ಸುಪ್ರತಾಪ ॥ ೫೧ ॥

**ಅಷ್ಟತಾಳ –**

ತಿಳಿಯದ ಮುಗುಧ ಪ್ರಾಣ । ಸಾಸಿರ ಕೋಟಿ । ಕೊಲೆಯಾಯ್ತು ದುರ್ಮರಣ॥ ಅಲೆವ ಜೀವದ ಕಾಶಿ । ಯೊಳು ವಿಶ್ವ ಸಮತೋಲ । ಕಳೆಯಿತು ನಿನ್ನಿಂದ । ಅದಕೆ ನರಕಾರ್ಪಣ ॥ ೫೨ ॥

**ಏಕತಾಳ –**

ಶಿಶು ಮಹೀಸುರ ಭೂತೆ । ಪಶು ಕುಲ ಪ್ರಮುಖರ । ವ್ಯಸನಕನ್ಯಾಯವದು । ರಸೆಯೊಳಗಿರದವರೆ ॥ ಬೆಸುಗೆಯ ಸೂಕ್ಷ್ಮವ । ನರಿಯದೇ ನೀನು ॥ ಎಸಗಿದೆ ಶಿಕ್ಷೆಯ । ನರಕದೊಳಾನು ॥ ೫೩ ॥

**ಮಾರವಿ –ಏಕತಾಳ –**

ಬರಿದರೆ ಶಾಸ್ತ್ರವ । ಹರಟುವೆ ನೀನೆಲೆ । ವರಟು ಮುನೀಶ್ವರನೇ ॥ ನರಕವು ಶಾಶ್ವತ । ಪರಮಧಿಕಾರವು । ತೆರಳೆಲೆ ದ್ರೋಹಿಯೆನೆ ॥ ೫೪ ॥

**ಅಷ್ಟತಾಳ –**

ಕೋಪವನಾಂತದಕೆ । ರವಿಜಗೆ ಮಂತ್ರ । ಶಾಪವ ಕೊಡುವುದಕೆ ॥ ಆ ಪರಮೇಷ್ಠಿಯ । ಸ್ಮರಿಸುತ್ತ ನಯನದ । ಆಪವನೊಗೆಯಲಿಕೆ ॥ ೫೫ ॥

**ಕೇದಾರಗೌಳ – ಝಂಪೆತಾಳ –**

ಮಿತ್ತುವಿನ ಗೋಲ ಜಗಕೆ । ನನ್ನಿಂದ । ಸತ್ತನೊಣಗಳ ಭಾರಕೆ ॥ ಮತ್ತೆ ನೀನೋರ್ವ ಸಮನು । ಧರೆಗೆ ಚ್ಯುತಿ । ವೆತ್ತು ಬೀಳುತ ಶೂದ್ರನು ॥ ೫೬ ॥ ನೀ ಮಹಿಗೆ ದ್ವಾಪರೆಯೊಳು । ವಿದುರನಹ । ನಾಮದೊಳು ಕೆಳಗೆ ಬೀಳು ॥ ಶ್ರೀ ಮನೋಹರ ಪಕ್ಷದಿ । ಮನವೆಳಸಿ । ಶೈಮಿನಿಗೆ ಬಾ ಮೋದದಿ ॥ ೫೭ ॥

**ಭಾಮಿನಿ –**

ಎಂದು ಮುನಿ ಘನ ಘೋರ ಶಾಪವ । ನಂದು ಸೂರ್ಯಾತ್ಮಜಗೆ ನೀಡಲು । ಕಂದಿದನು ನೇಸರನು ಅಸ್ತದೊ । ಳೊಂದು ಪದವಿಡಿಯೆ ॥ ಕಂದು ಮುಖನಿಗೆ ಶಾಪ ತಾಮಸ । ವೊಂದು ಕೂಡಲು ಘೋರ ಕತ್ತಲೆ । ಹೊಂದಿತದ ಪರಿಹಾರ ಕೆನ್ನುತ । ಮಂಗಳಾರತಿಯ ॥ ೫೮ ॥

ಬೆಳಗಿದರಾರತಿ ರಾಮಚಂದ್ರನಿಗೆ । ಕಳೆಯಲಂಥವು ಅಗ್ನಿ ಬೀಜನಿಗೆ ॥ ಸೆಳೆದೊಯ್ದು ಕಜನಿಯ ಹಗಲು ನರ್ತಪಗೆ ॥ ಹೊಳೆಪಿನಾರತಿಯ ಬೆಳಗಿದರು ॥ ೫೯ ॥

# ಮಾರ್ಕಂಡೇಯ ಚರಿತ್ರೆ

– ಕೃತಿಕರ್ತರು –
ಜಿ. ಎಂ. ಭಟ್ಟ ಕೆ. ವಿ.

# ಮಾರ್ಕಂಡೇಯ ಚರಿತ್ರೆ

**ನಾಟಿ – ಅಷ್ಟತಾಳ**

ಪಾಶ ಅಂಕುಶಧರ ಮೂಷಿಕ ವಾಹನ । ಈಶ ಸಂಜಾತ ಗಣಪ ॥ ವಾಸುಕೀಶಯನ ಪಿನಾಕಧಾರನು ಮತ್ತೆ । ಶ್ರೀ ಶಾರದೆಯರ ಭಜಿಪ ॥ ೧ ॥

ಆಶು ಕವಿಗಳನೆಲ್ಲ ಸ್ಮರಿಸುತ್ತ ಶ್ರೀ ಶೈಲ । ವಾಸಿ ಗಿರಿಜಾಂಬಿಕೆಯೆ ॥ ಕಾಸಾರಜ ಭವ ಪಾದಕ್ಕೆರಗಿ ಪೇಳುವೆ ಮುನಿ । ಯಾ ಶಿವ ಭಕುತನ ಕಥೆಯ ॥ ೨ ॥

ಇತ್ತ ದ್ವಾಪರ ಯುಗದಿ ಪಾಂಡವ । ಪೃಥ್ವಿಪಾಲರು ವೈಮನಸ್ಸಿನ । ಕುತ್ತಿನಲಿ ಕೌರವರು ಭೀಷ್ಮರು । ಸುತ್ತ ನೆರೆಯೆ ॥ ೩ ॥

–ವಚನ –

ಭೀಷ್ಮರು ಕುರು – ಪಾಂಡವರಿಗೆಂದರೆಂತೆನೆ –

**ಕೇದಾರಗೌಳ – ಅಷ್ಟತಾಳ –**

ಎಲೆ ಯುಧಿಷ್ಠಿರ ಕೇಳು ಹಸ್ತಿ ನಗರದೊಳರ್ಧ । ನೆಲವು ನಿಮ್ಮಯ ಪಾಲಿಗೆ ॥ ಹಳುವ ಬಿಚ್ಚೈತಂದು ಇಂದ್ರ ಪ್ರಸ್ಥದಿ ನೀವು । ನೆಲೆಸುವುದುಚಿತೆನಲವರ್ಗೆ ॥ ೪ ॥ ನುಡಿಯೆ ದುರ್ಯೋಧನ ವಾರಣಾವತದೊಳು । ಪೊಡವಿ ಪಾಲರಿಗ್ಯೋಗ್ಯವಿರುವ॥ ವಡವೆಗಳ ಸಹಿತೊಂದು । ವಸತಿ ಗರಗುವ ಗೃಹ । ಜಡಜ ವರ್ಗವು ಪೋಗಿರೆನುವ ॥ ೫ ॥ ಮಾತಿಗವರೆಲ್ಲರೂ ಶಿರವದೂಗಲು ಭೀಷ್ಮ । ಕಾತರವೇಕೆಂದು ಭರದಿ ॥ ನೀತಿವಂತನು ವಿದುರ ಸೂಚಿಸುತವನಿಗೆ । ವಾತ ಸಂಭವನಿಹನು ಬಲದಿ ॥ ೬ ॥ ಮತ್ಸರ ತರವಲ್ಲ ಕಾಯೆ ನಿಮ್ಮನು ಭಕ್ತ । ವತ್ಸಲನಿರುವ ನವಶತ॥

ವತ್ಸರ ಪೇಳುತ್ತಲವರ ಬೀಳ್ಕೊಡಲಂದು । ಸತ್ಯಂಪ್ರದಾಯರೈತರು ತ ॥ ೭ ॥

**ಮಾರವಿ ಏಕತಾಳ –**

ಇರಲಿತ್ತಲು ಕುರುನೃಪತಿಯ ಸೂಚನೆ । ತೆರದಿ ಪುರೋಚನನು ॥ ಭರದೊಳಗವನ್ನೈ ತರುತಲಿ ಯೋಚಿಸಿ । ಕರದಲಿ ಪಂಜುವನು ॥ ೮ ॥ ಪಿಡಿಯುತ ಲಾರ್ಘಟೆಯೊಳಗರಗಿನ ಮನೆ । ಸುಡಲೈದಿಹನವನೇ ॥ ಅಡಗಿಹ ಮತ್ಸರದಗ್ನಿಯು ಭುಗಿಲೆನೆ । ಅಡಗಿತು ಕರಗಿ ಮನೆ ॥ ೯ ॥

**ಭಾಮಿನಿ –**

ಕರ ಕರಗಿ ನೀರಾಯ್ತು ನೆಲದಲಿ । ಯರಗಿ ನಾಲಯವೆಂದು ಜನತೆಯು । ಬೆರಗುಗೊಳುತಿರಲಿತ್ತ ಪಾಂಡವ । ತರಳರೈವರಲಿ ॥ ಪರಮ ಬಲುಹಿನ ಪವನ ಸಂಭವ । ನಿರದೆ ಪಿತ್ತಿದನನಕ ವಿದುರನು । ಪೊರೆದ ಸಂಜ್ಞೆಯ ಬಲದ ಮಾರ್ಗದಿ। ತೆರಳೆ ಹರಿ ಪೊರೆದ ॥ ೧೦ ॥

**ಸೌರಾಷ್ಟ್ರ – ತ್ರಿವುಡೆ –**

ನಾಕಪತಿ ದೇವೇಂದ್ರನೊಂದಿನ । ಲೋಕವಾರ್ತೆಯ ಗ್ರಹಿಸೆ ಅಜನೊಳ । ಗೇಕ ಚಿತ್ತದೋಳೊರೆದ ಸಭೆಯಲಿ । ಸ್ವಾಗತಿಸಿಯೆ ॥ ೧೧ ॥ ಯಾಕೆ ತ್ವರಿತದಿಯೆನ್ನ ಕರೆದಿಹೆ । ಸಾಕುಯೆನಿಸಿತೆ ದಿವದ । ವೈಭವ । ಕಾಕು ರಕ್ಕಸ ಬಾಧೆಯೊಳಗೆ ವಿ। ವೇಕಯುತನೆ ॥ ೧೨ ॥ ಮುದದೊಳೊರೆವೆನು ದಿವದೊಳೈಂದ್ರಿಕ । ಪದವಿ ನಿಯಮಿತವಿರಲು ಮಧ್ಯದಿ । ವಿಥ ವಿಥದಿ ದೇವ ವರ ಬಲದೊಳು । ಹದವ ಕೆಡಿಸಿ ॥ ೧೩ ॥

**ಕೇದಾರಗೌಳ – ಅಷ್ಟತಾಳ –**

ಯಾರು ಸದ್ಯದಿ ದೇವಲೋಕದ ಪುಣ್ಯಕೆ । ಮಾರಕರಾಗಿಹರವರನು ॥ ಮೋಹಗೊಳಿಸುತ ದಿವ್ಯ ಶಾಂತಿಯು ನೀಡುವೆ । ಆರದು ಯೆಲ್ಲವ ನೀನು ॥ ೧೪ ॥ ಧಾರಿಣಿಯೊಳು ಭೃಗುಸುತನು ಮೃಕಂಡುವು । ಘೋರ ತಪ ಗೈಯುತಿಹನು ॥ ಕಾರಣವೇನೆಂದು ತಿಳಿಯದಿದ್ದರೆ ಸತ್ಯ । ಓರಣವಹುದೇ ನೀನು ॥ ೧೫ ॥ ಈ ತತೂಕ್ಷಣ ತಪವ ನಿಲ್ಲಿಸಬಹುದೇ ಪೇಳ್ । ಮಾತು

ದೇವಿಯ ವರನಲಿ ॥ ಯಾತುಧಾನ ನಾನಿನ್ನೇನ ಪೇಳಲು ಶಕ್ತ । ನೀ ತಿಳಿದಿರನಿಂದಿನಲಿ ॥ ೧೬ ॥

**ಸುರಟಿ – ಏಕತಾಳ –**

ಬೆದರುವೆ ಯಾಕಿಂದ್ರ । ಸುಚರಿತ । ಪದವಿಯ ಗುಣಸಾಂದ್ರ ॥ ಪದುಳದಿ ನಾ ನಿರ್ಗಮಿಸುತ ಪರಿಕಿಪೆ । ಸದಮಲ ಚರಿತನು  ಸರಿವ ಮುನೀಂದ್ರ ॥ ೧೭ ॥

**ಕಂದ –**

ಅಸ್ತೆನುತ ದೇವೇಂದ್ರ ಸ । ಮಸ್ತ ಸುರಸಿಕರ ಸಭೆ ಮುಗಿಸಿ ತೆರಳಲ್ ॥ ಸ್ವಸ್ಥದಿ ಶ್ರೀ ಬ್ರಹ್ಮಾಂಡ ಜನಕಂ । ಅತ್ತಲು ವ್ಮೃಕಂಡು ಮುನಿಯಾಶ್ರಮ ಕೈಪಿದಂ ॥ ೧೮ ॥

**ಸೌರಾಷ್ಟ್ರ – ತ್ರಿವುಡೆ –**

ಅತ್ತಲಾ ಭೃಗು ಮುನಿಕುಲೇಂದ್ರನ । ಪುತ್ರನಾಗಿಹ ವರ ಮೃಕಂಡುವು । ಕೃತ್ತಿ ವಾಸನ ತಪದೊಳಿರುತಿರೆ । ಸತ್ವರದೊಳು ॥ ೧೯ ॥

**ವಾರ್ಧಿಕ –**

ನೀಳ ವೃಕ್ಷಂಗಳಿಂ ಮಾಗಿರುವ ಫಲಗಳಿಂ । ಮೇಲಾಂತಲತೆಗಳಿಂ ವಾಸಿತದ ಪೂಗಳಿಂ । ಹಾಲುಣುವ ಕರುಗಳಿಂ ಕಲಹಂಸ ಮರಿಗಳಿಂ । ಸಾಲು ಗಿಳಿ ವಿಂಡುಗಳಲಿ ॥ ಕಾಲೆಳೆವ ಅಹಿಗಳಿಂ ಘೋರ ಮುಂಗುಸಿಗಳಿಂ । ಓಲಾಡ್ವ ಭ್ರಮರದಿಂ ಬೀಸುತಿಹ ಅನಿಲ ದಿಂ । ವಾಲಿರುವ ವಟವೃಕ್ಷ ಮೂಲದಲಿ ಭೃಗು ವಂಶ । ಮುನಿಯ ಎಲೆಮನೆ ಎಸೆವುದು ॥ ೨೦ ॥

**ತ್ರಿವುಡೆ –**

ಅಖಿಳ ಬ್ರಹ್ಮಾಂಡವನು ಸೃಜಿಸಿಹ । ಸಕಲ ವ್ಯಾಪಕ ಬ್ರಹ್ಮನು ॥ ಪ್ರಖರ ತೇಜೋಮಯನು ಇಳಿದನು । ಮೃಕಂಡುಬಳಿ ॥ ೨೧ ॥

**ಅಷ್ಟತಾಳ –**

ಶರಣ ನಿನ್ನಯ ತಪಕೆ ಮನದಿ ಮೆಚ್ಚಿದೆ ನಯನ । ತೆರೆದು ನೋಡೆನಲಿಕವನು॥

ಧರಣಿ ಮಂಡಲ ನೋಡಿ ತನುವು ಕಂಪನದಿಂದ । ಪರಮೇಷ್ಠಿಯನು ಕಾಣುತ್ತವನು ॥ ೨೨ ॥

## ಕಾಂಬೋಧಿ – ಝಂಪೆ –

ಎದ್ದು ವಾಣೀವರನ ಕಂಡು ಪುಳುಕಿತನಾಗಿ । ಶುದ್ಧ ಭಾವದೊಳವನ ಪದವ ॥ ಅದ್ದಿದನು ಆನಂದ ಬಾಷ್ಪದಿಂ ಮಗುಳೆಂದ । ಬುದ್ಧಿವರನೆನ್ನ ಜನ್ಮವನು ॥೨೩॥ ಸಾರ್ಥಕವಗೊಳಿಸಿದೆಯ ತಪದ ಕೊನೆಯೊಳಗೆ ಪರ । ಮಾರ್ಥ ಮಾರ್ಗದಿ ಕಂಡೆ ಧನ್ಯ ॥ ಆರ್ತನಾಗಿಹೆ ಸತಿಯ ವ್ಯಾಕುಲವ ಪರಿಹರಿಪ । ಸ್ವಾರ್ಥವಿದೆ ಕ್ಷಮಿಪುದೆನ್ನ ॥ ೨೪ ॥

## ಅಷ್ಟತಾಳ –

ಎನಲಾ ಸರಸ್ವತಿಯ ವಲ್ಲಭನು । ಋಷಿವರ್ಯಗೆಂದನು । ಘನ ತಪೋಬಲಕಿಂದು ಮೆಚ್ಚಿದೆನು ॥ ಮನದಿ ಚಿಂತೆಯ ತಾಕದಿರು ತವ । ವನಿತೆ ಕೀರ್ತಿಯ ಬೆಳೆಸಲೆಂದುದ । ಅನುಕರಿಸಿ ಜೀವನದಿ ಸುಖಿಪುದು । ಸನುಮತದಿ ನಸುನಗುತ ಲೊರೆದನು ॥ ೨೫ ॥ ಇಷ್ಟವೇನೆನಲೆಂದ ಮುನಿರಾಯ । ಸಂತಾನವಿಲ್ಲದೆ । ಶ್ರೇಷ್ಠವಾಗದು ಜನ್ಮವದು ಜೀಯ ॥ ಕಷ್ಟಪಡುತಿಹ ಯೆನ್ನ ಪತ್ನಿಯ । ಭೀಷ್ಟ ಪಾಲಿಪುದೆನುತ ಸಂತತಿ । ಸ್ಪಷ್ಟ ಪಡಿಸಲು ಶಾರದೆಯವರ ನಿ । ರ್ದಿಷ್ಟಗೊಳಿಸಿದ ಮುಗಿಸಿ ದಿನಚರಿಯ ॥ ೨೬ ॥ ಷಂಡನೋರ್ವಗೆ ದೀರ್ಘದಾಯುಷ್ಯ । ಮತ್ತೋರ್ವನಹ ಪ್ರ । ಚಂಡ ಜ್ಞಾನಿಗೆ ಅಲ್ಪದಾಯುಷ್ಯ ॥ ಗಂಡು ಸಂತತಿ ಎರಡರಿದರಲಿ । ಕಂಡರಿದು ನೀ ಪೇಳು ಶೀಘ್ರದೊ । ಳಿಂದು ದೃಢಗೊಳಿಸಿರ್ಪೆ ಒಂದನು । ಎಂದೆನಲು ಮುನಿಯಾಂತ ಸಂತೋಷ ॥ ೨೭ ॥

## ಭಾಮಿನಿ –

ಅಸ್ತೆನುತ ಶಿವ ಪೂಜೆ ಸಲಿಪರೆ । ಪುಸ್ತಕಾಧಿಪನೊರೆದುಗಮಿಸಲು । ಮಸ್ತಕದಿ ಬಲವಂತ ದೊರಕುವನೆನುತ ತೋಷದಲಿ ॥ ಸ್ವಸ್ತಿ ವಾಚನದಿಂದ ಶಿವನನು । ವಿಸ್ತರದೊಳರ್ಛಿಸಿದ ಫಲದಲಿ । ಪತ್ನಿ ಗರ್ಭಿಣಿಯಾಗಿ ಪಡೆದಳ । ವತ್ಸನೋರ್ವ ನನು ॥ ೨೮ ॥ ಗುರುಮುಖದಿ ಮಾರ್ಕಾಂಡೇಯ ನೆಂ । ದರುಹಿಸುತ ಅಕ್ಷರವ ಪೋಷಿಸಿ । ಸರುವ ಸಂಸ್ಕಾರಗಳ ನೀಡುತ । ಗರ್ಭದಷ್ಟಮದಿ ॥ ಪರಮವಹ

ಬ್ರಹ್ಮೋಪದೇಶವ । ತರಳಗರುಹುತ ವೇದ ವಿದ್ಯವ । ಗುರುಕುಲದಿ ಕೊಡಿಸಿರಲು। ಷೋಡಶ । ವರುಷ ಪ್ರಾಪ್ತಿಸಲು ॥ ೨೯ ॥ ತರಳ ಬೆಳೆದನು ಅಷ್ಟಮಿಯ ಶಶಿ । ತೆರದಿ ತೇಜೋಮಯನು ಪೂರ್ಣನು । ಬರುತಲೊಂದಿನ ಗತದ ನೆನಪನು । ಮೆಲುಕಿಸುತಲವನು ॥ ೩೦ ॥

## ಅಷ್ಟತಾಳ –

ಕುಲದ ಶ್ರೀ ಗುರುವಿನೊಳಾನು । ವಿದ್ಯೆ । ಕಲಿವಾಗ ವಟುಗಳೆಂದುದನು ॥ ತಲೆಯೊಳಗಿರಿಸಿ ವಿಮರ್ಶಿಸಿ ಹೀಗೇಕೆ । ಬಲಕೆ ಬ್ರಹ್ಮಜ್ಞಾನವಿರುವಗೆ । ಸುಲಭವೇ ಕ್ಷೀಣಾಯುವೆಂದನು ॥ ೩೧ ॥ ಅದರೊಳಿನಿತಾದುದೇಕೆ । ತನ್ನ । ಸಾಧಿಸಿರುವ ಪಿತೃಗಳಿಗೆ ॥ ಆದ ವಿಚಾರವು ತಿಳಿಯದಿರ್ಪುದೆ ಪೋಗಿ । ಆದರದೊಳಿನಿತೆಲ್ಲಿ ತಾಯನು । ಮೋದಿಸಿದ ವೇಧಸನ ಕೇಳುವೆ ॥ ೩೨ ॥

## ಸೌರಾಷ್ಟ್ರ – ತ್ರಿವುಡೆ –

ಉಲಿದು ಪೊರಟನು ಜನನಿ ಜನಕರ । ನಿಲಯ ದಾರಿಯ ಪಿಡಿದು ಬರುತಿರೆ । ಎಲೆಯ ಸೌಧಾಂತರದಿ ನುಡಿವುದ । ಕೇಳಿ ನಿಂತ ॥ ೩೩ ॥ ಇತ್ತ ಪರ್ಣಾಶ್ರಮದಿ ಮುನಿ ವಧು । ಅತ್ತು ತನ್ನಯ ಪತಿಯ ಚರಣವ । ನೆತ್ತಿ ಕಂಬನಿ ಸುರಿಸೆ ವ್ಯಾಕುಲ । ವೆತ್ತು ನುಡಿದ ॥ ೩೪ ॥

## ಝಂಪೆ –

ಹದಿನಾರು ತುಂಬಿಹುದು ಮುದದಿ ಮಾರ್ಕಾಂಡನಿಗೆ । ಒದಗಿಬರುವುದು ಮರಣವೆನುತ ॥ ಕಡು ನೊಂದು ಮನ ಕರಗಿ ಭುವಿಗೆ ಹಮ್ಮೈಸಿರುವ । ಸುದತಿಯನು ಕರೆದು ಭೃಗುಜಾತ ॥ ೩೫ ॥ ವಿಧಿಯ ಕೈ ಬರೆಹವದು ಏನ ಮಾಡುವದಿನ್ನು । ಉದಕವನು ಕೆರೆಗೆ ಚೆಲ್ಲುವುದು ॥ ವಿಧಿ ನಿಯಮವದರಂತೆ ನಡೆದುಕೊಳ್ಳುದೇ ವಿಹಿತ । ಅವನು ಪರಿಹರಿಪರಾರೆಂದು ॥ ೩೬ ॥ ಬೆದರುತಿಹ ಸಮಯದೊಳು ಬರುತ ಮಾರ್ಕಾಂಡೇಯ । ಕದದ ಹತ್ತಿರ ನಿಂತು ಕೇಳ್ದು ॥ ಮುದವಾಂತು ಪಿತೃಗಳಿಗೆ ಧೈರ್ಯ ಪೇಳಲಿಕವನು । ಪದುಳದಿಂದೊಳಗೆ ಬಂದ ॥ ೩೭ ॥ ಮೆಲ್ಲನೈತರುತ ಮಹ ಜನನಿ ಜನಕರ ಚರಣ । ಪಲ್ಲವಿಗೆ ನಮಿಸೆ ಮೃದು ಕರದಿ ॥ ಗಲ್ಲವನು ಪಿಡಿದೆತ್ತಿ ಸಂತಸದಿ ನುಡಿದರಿವು । ಮಲ್ಲನನು ತಳ್ಕಿಸಿದ ಭರದಿ ॥ ೩೮ ॥

**ಅಷ್ಟತಾಳ –**

ಏನಿದೆನ್ನಯ ತಾತ – ಮಾತೆ ಕಣ್ಣಲಿ ನೀರು । ಹಾನಿಯೇ ಶಿವನರ್ಚಿಸಿರಲು ॥ ಜ್ಞಾನಿ ವಿನಯದಿ ಕೇಳಲೊರೆದ ಮೃಕಂಡುವು । ಕೇಣ ಎಹುದೆಲ್ಲವ ಪೇಳಲು ॥ ೩೯ ॥

**ಕೇದಾರಗೌಳ – ಝಂಪೆ –**

ಮುನಿಯು ಮಾರ್ಕಾಂಡೇಯನು । ನಸುನಗುತ । ಜನನಿ ಜನಕರಿಗೆಂದನು ॥ ಘನತೆಯಲಿ ಬ್ರಹ್ಮವನ್ನು । ತಿಳಿದವರ । ದಿನಪಜನು ಬಯ್ವನೇನು ॥ ೪೦ ॥ ಇಂದು ಎನ್ನಾಯು (ರ್) ದಾಯ । ಮುಗಿಯಲದು । ಇಂದಿರೇಶನ ಪೂಜೆಯ ॥ ಇಂದು ನಾನೇ ಮಾಳ್ಪೆನು । ಶಿವನೊಲುಮೆ । ಬಂದಿರಲು ವಿಜಯ ಪಥನು ॥ ೪೧ ॥ ಎಂದವರ ಸಂತವಿಸುತ । ಶಿವ ಪೂಜೆ । ಗಂದು ತಾನಣಿಗೈಯುತ ॥ ಅಂದಿನಲಿ ಬೆದರುತವರು । ಇರಲತ್ತ । ಮಂದನಗ್ರಜ ಮಿತ್ರರು ॥ ೪೨ ॥

**ಸೌರಾಷ್ಟ್ರ – ತ್ರಿವುಡೆ –**

ಇತ್ತ ಶೈಮಿನಿಯೊಳಗೆ ಭಾನುಜ । ಸುತ್ತ ಘೋರಾಕೃತಿಯ ಭಟರನು । ಚಿತ್ರ ಗುಪ್ತರ ಕೂಡಿ ಸಭೆಯಲಿ । ಮತ್ತೆ ಕೇಳ್ದ ॥ ೪೩ ॥ ಚಿತ್ರಗುಪ್ತರೆ ಇಂದು ನಿಮ್ಮಯ । ಪುಸ್ತಕದಿ ಅಲ್ಪಾಯುವಾದವ । ಮತ್ತೆ ಯಾರಿಹರೆನ್ನಲೊರೆದರು ವಿ । ಚಿತ್ರವೊಂದ ॥ ೪೪ ॥ ಭುವಿಯೊಳಗೆ ಮಾರ್ಕಾಂಡೇಯ ಮುನಿ । ಅವನಿಋಣ ತೀರಿರಲು ಭಕ್ತನು । ಶಿವನ ಪೂಜೆಯ ಗೈಯುತಿರುವನು । ಅವನ ತರಲು ॥ ೪೫ ॥ ಭಟರು ಪೋಗುವದೆನುತ ಸೂಚಿಸೆ । ದಿಟವಿದೆನ್ನುತ ಪೊರಟು ತಾನೇ । ನಟನೆಯಲ್ಲವು ಮುನಿಯ ಸುತನವ । ಹಠದಿ ಬಂದ ॥ ೪೬ ॥

**ಭಾಮಿನಿ –**

ಗುಡುಗು ಮಿಂಚಿನ ಸೆಳಕು ಕಿಡಿಕಿಡಿ । ಸಿಡಿಲಿನಬ್ಬರ ಧ್ವನಿಯು ಭೂಮಿಯ । ಕಡೆಗಿಳಿವುದೋ ತಾನೆಂಬ ತೆರೆದಲಿ । ಧಡಿಗರೊಡನಿಳಿದ ॥ ಮೃಡ ಸಮೋಪಮ ವಟುವು ಶೂಲಿಯ । ಬಿಡದೆ ಅರ್ಚಿಸುತಿರ್ಪ ದೃಶ್ಯವ । ಒಡನೆ ಕಂಡೆಮರಾಯ ಪಾಶವ । ತೊಡಿಸೆ ಮೃಡ ಸಹಿತ ॥ ೪೭ ॥

ತುಂಗ ಭೃಗುಕುಲಜಾತ ಮುನಿ ವಟು । ಪುಂಗವನು ಮೂರ್ಛಿಸುತ ಪರಶಿವ । ಲಿಂಗವನು ತಾನೆರಡು ಕರದಲಿ । ಪಿಡಿದು ಬಿಗಿಯಾಗಿ ॥ ಅಂಗಜಾರಿಯು ರುದ್ರ ದುರುಳರ । ಭಂಗಹರ ಮಹದೇವ ರಕ್ಷಿಸು । ರಂಗ ಸಖ ನೀನೆಂದೆನುತ ಚೀರಿದನು ಬೆಂಡಾಗಿ ॥ ೪೮ ॥

**ಅಷ್ಟತಾಳ –**

ಆರ್ತನಾದವನಾಲಿಸಿ । ಲಿಂಗಕೆ ಶರ । ಣಾರ್ಥಿಯಾದವನೆಬ್ಬಿಸಿ ॥ ಅರ್ತಿಯಿಂದಲಿ ಜೀವ । ಮೂರ್ತಿ ಮೈದೋರುತ್ತ ಕಾರ್ತಿಕೇಯನ ಪಿತನು ಯಮನೇ । ಸ್ವಾರ್ಥ ನಿನ್ನಧಿಕಾರ ಪಥದಲಿ ॥ ೪೯ ॥ ಅಲ್ಲದಿರೆನ್ನಯ ಗರಳಕೆ । ನಿನ್ನಯ ಪಾಶ । ವಿಲ್ಲಿಹ ವಟು ಕಂಠಕೆ ॥ ಬಿಲ್ವ ಪತ್ರೆಯ ನಿಕ್ಕಿ ಮಲ್ಲಿಕಾರ್ಜನೆ ಗೈವ । ಬಲ್ಲಿದನು ನೀನಾಗಿ ಇಂತಹ । ಕ್ಷುಲ್ಲಕಾಹಂಕಾರ ಗೈವುದೇ ॥ ೫೦ ॥

**ದ್ವಿಪದಿ –**

ಅಂತಕಾಂತಕನಾದ । ರುದ್ರ ಘರ್ಜನೆಯ ॥ ಅಂತಕನು ನೋಡುತಲಿ । ಬೆದರಿದನು ಬಗೆಯ ॥ ೫೧ ॥ ಕಂತುಹರ ನೀನಿಂತು । ಕ್ರೋಧಗೊಳ್ಳುವೆಯ । ಆಂತು ಕೊಂಡನೆ ಕಾವಂ । ಉರಿಗಣ್ಣ ಪಗೆಯ ॥ ೫೨ ॥ ಎಂದೆನುತ ಭಕ್ತಿಯಲಿ । ಶಿವ ಪದವ ಪಿಡಿಯೆ ॥ ಚಂದ್ರಚೂಡನು ಕೇಳ್ದ । ಜೈಮಿನಿಯ ದೊರೆಯೆ ॥ ೫೩ ॥

**ಅಷ್ಟತಾಳ –**

ದಕ್ಷಿಣದ ದೊರೆ ಕೇಳು ನಿನ್ನಿರವ । ಸೂಚನೆಯ ಕೊಡದೆ । ಭಕ್ಷವಾಗದು ಮೃತ್ಯುವಿಗೆ ಜೀವ ॥ ಅಕ್ಷಿ ತೆರೆಯುವೆನೆಂದು ಬೆದರದೆ । ಕುಕ್ಷಿಯೊಳು ನೀನಿಡದೆ ವರ್ಮವ । ಸೂಕ್ಷ್ಮವನು ಪೇಳೆನಲು ಕಾಲನು । ದಕ್ಷ ವೈರಿಯ ಮಾತಿಗೆಂದನು ॥ ೫೪ ॥ ಸ್ವಾಮಿ ಮೀರೆನು ನಿಮ್ಮ ನುಡಿಗಳನು । ಸಹಜವಲ್ಲವೇ । ನೇಮದೊಳು ಆಯುಷವು ತೀರ್ದವನು ॥ ಬ್ರಹ್ಮ ಬರೆದಾಯುಷ್ಯ ಷೋಡಶ । ವಾ ಮುನೀಂದ್ರ ಮೃಕಂಡು ಜಾತಗೆ । ಜೈಮಿನಿಯ ಸಭೆಯೊಳಗೆ ಮಿತ್ರರು । ನಾಮ ಸೂಚಿಸೆ ಜವದಿ ಬಂದೆನು ॥ ೫೫ ॥

**ಸುರಟಿ – ಏಕತಾಳ –**

ಪೂಜೆಗೈಯುತಿರುವ । ಮತ್ತದು । ಭೋಜನ ಕುಳಿತಿರುವ ॥ ನೈಜಾಂಗನೆಯೊಳು ಕಾಮ ಕೇಳಿಯಲಿ । ತ್ಯಾಜ್ಯವು ನಿನ್ನವಕೃಪೆಯೊಳು ಮರಣವು ॥ ೫೬ ॥

**ಏಕತಾಳ –**

ಈಶನೇ ಸಕಲಾವಾಸನೇ । ಹೇ ಶಿವ ಶಂಕರ ನಾಶರಹಿತ ಸರ್ವಗಾಶಕರ್ತೃವೆ ತವ ಪದ । ಕಾಸಾರಜಕೊಂದಿಪೆನು ॥ ೫೭ ॥ ಅಭವನೆ ಸರ್ವಭವ ವರ್ಜ್ಯನೆ ॥ ವಿಭವ ಕೈಲಾಸದಿ ನಿರ್ಭವ ಶಿವನೆ ಸರ್ವಭವಹರ, ಕುಭವ ವೈರಿ ತವಪದ ಜಲಭವಕೊಂದಿಪೆ ಕ್ಷಮಿಪುದು ॥ ೫೮ ॥

**ರೂಪಕತಾಳ –**

ಕ್ಲೇಶವಿಲ್ಲ ತೆರಳು ನಿನ್ನ । ಪಾಶ ಸಹಿತಲಿ ॥ ಹೇಶ್ಯೈಮಿನೀಶ ನನ್ನ ಎದುರು । ತೋಷದಿಂದಲಿ ॥ ೫೯ ॥

**ಏಕತಾಳ –**

ರಸೆಯೊಳು ಚಾತುರ್ । ದಶಕಲ್ಪದ ದೀರ್ಘಾ । ಯುಷವನು ನೀಡಿಹೆನು ॥ ವಸುಧೆಗೆ ಮಾರ್ಕಾಂಡೇಯನ ಕೀರ್ತಿಯು । ಪಸರಿಸೆ ಶುಭವನ್ನು ॥ ೬೦ ॥ ತರಲೆನೆ ಭೃಗುಕುಲ ತರಳನುಯೇಳುತ । ಹರಪದಕೊಂದಿಸುತೆ ॥ ಪರಿಹರಿಸಿದೆ ಮಮ ಪಿತೃಗಳ ಸಂಕಟ । ಹರ ಬದುಕಿದೆ ನಿರತ ॥ ೬೧ ॥

**ತಾಳ –ತ್ರಿವುಡೆ –**

ಧನ್ಯನಾದೆನು ಶಿವನೆ ತಪವನು । ಮನ್ನಿಸಿದೆ ಪಿತೃಗಳಿಗೆ ತೃಪ್ತಿಯ । ನಿನ್ನು ನೀಡಿದೆ । ಮಂಗಳಾತ್ಮಕ । ಜಾನ್ಹವಿಧರ ॥ ೬೨ ॥

**ಭಾಮಿನಿ –**

ಹರನು ಅಸ್ತೆನುತೆಂದು ರಜತದ । ಗಿರಿಗೆ ಸಾಗಲು ಶುಭದಿ ಪರ್ವತ । ತರಳೆ ಸ್ವಾಗತಗೈದು ಕರೆದಳು । ಭರದಿ ಹರವರನೆ ॥ ೧/೨

**ಸೌರಾಷ್ಟ್ರ – ತ್ರಿವುಡೆ –**

ಇತ್ತ ಮಾರ್ಕಾಂಡೇಯ ಮುನಿಪನು । ಚಿತ್ತದಲಿ ಯೋಚಿಸಿದ ಕಳೆಯಿತು । ಮತ್ತಾರು ಮನ್ವಂತರಂಗಳು । ಸಪ್ತಮದ ಅವಧಿ ॥ ಪ್ರಾಪ್ತವಾಯಿತು ದ್ವಾಪರವು ಮಹ । ಚಿತ್ತಜಾತನ ಪಿತನು ಅವತರಿ । ಸುತ್ತ ದ್ವಾರಕೆಯೊಳಗೆ ವಿಭವದಿ । ಮಿತ್ರರೊಡಗೂಡಿ ॥ ೬೪ ॥

**ರೂಪಕತಾಳ –**

ಇಹನು ಸಂತರ ಕೈಗೆ ಸಿಗನು ಮನ್ವಂತರ ಕಳೆಯೆ । ಮಹಿಮ ದರ್ಶನವೀವನು ॥ ತಹೆನು ವಿಜ್ಞಾನವನವನಿಂದ । ಬಹೆನು ತಾನೆಂದೆನುತಲವನು ॥ ೬೫ ॥

**ಝಂಪೆತಾಳ –**

ಕಂಸ ಧ್ವಂಸನು ಮುನಿಯ ಕುಲಾವತಂಸನು । ಹಂಸದೇರನ ಸಖನು ಪುರದಿ ॥ ಸಂಸಾರ ದಶದಲಿ ಜಗವ ಮರೆತಷ್ಟಾಂಶ । ಕಂ ಶಯನನಿರ್ದ ವೈಭವದಿ ॥ ೬೬ ॥

**ಸೌರಾಷ್ಟ್ರ – ತ್ರಿವುಡೆ –**

ಕಂಡು ಪುಳಕಿತನಾಗಿ ಭೃಗುಜ ಮ್ಮ । ಕಂಡುಜಾತನು ಹರ್ಷ ತುಂದಿಲ । ಗೊಂಡು ನುಡಿಸಿದ ಸಿರಿಯ ರಮಣನ । ಅಂದು ಮುದದಿ ॥ ೬೭ ॥

**ಕೇದಾರಗೌಳ – ಝಂಪೆ –**

ಕಂಡೆ ಲಕ್ಷ್ಮೀಧರನ । ಕಂಡೆ ಭಾಗ್ಯೋಧರನ । ಕಂಡೆಸುರ ಸನ್ನುತನ । ಕಂಡೆಗರುಡ ಧ್ವಜನನು ॥ ಕಂಡೆ ಪುರುಷೋತ್ತಮನ । ಕಂಡೆ ಪೀತಾಂಬರನ । ಕಂಡೆ ವಿಶ್ವಂಭರನ । ಕಂಡೆ ಜಗದೋದ್ಧರಣನ ॥ ೬೮ ॥

**ಏಕತಾಳ –**

ದೂರದೊಳ್ಳೈತಹ ಖುಷಿಯ ಕಾಣುತ ಕೃಷ್ಣ । ವಾರಿಜ ಪೀಠವ ಕೂರ್ಚಗಳ ॥ ಭೂರಿ ತೋಷದೊಳರ್ಘ್ಯಪಾದ್ಯವ ನೀಡುತ್ತ । ನಾರಾಯಣನು ಕೇಳ್ದ ಕುಶಲ ॥ ೬೯ ॥

ನಿನ್ನ ದರ್ಶನ ಭಾಗ್ಯ ದೊರೆತುದೇ ಪುಣ್ಯವು । ಸನ್ನುತಾಂಗನೆ ಕ್ಷೇಮವೇನು ॥ ಎನಲು ಶ್ರೀ ಹರಿಯೊರೆದ ಪಾಂಡವರ್ಗ ದಾ । ರಣ್ಯವಾಸದ ಭವಣೆಯನ್ನು ॥ ೭೦ ॥

ಧರ್ಮನಂದನ ಭೀಮ । ಇಂದ್ರಜಾತನು ನಕುಲ । ಧಾರ್ಮಿಕ ಸಹದೇವನಲ್ಲಿ ॥ ಅಮ್ಮ ಕುಂತಿಯು ಮತ್ತೆ । ಧೌಮ್ಯರೊಡನೆ ವಾಸ । ಕಾಮ್ಯ ಕಾಂತಾರದಲಿ ॥ ೭೧ ॥

### ರೂಪಕತಾಳ –

ಪಾಂಡು ಚಕ್ರಾಧಿಪಗೆ ಪುಣ್ಯಾತ್ಮರಾ ಸುತರು । ದಂಡಧಾರನ ಕುವರ ಯುಧಿಷ್ಠಿರನ ॥ ಕಂಡು ಬರ್ಪೆನು ಎನಲು ಧರ್ಮ ದರ್ಶನಕೆಂದು ತವಕದೋಳ್ ಬಂದ ಶ್ರೀ ಕೃಷ್ಣನು ॥ ೭೨ ॥

### ಭಾಮಿನಿ –

ಮುನಿಯೊಡನೆ ನಡೆತಂದು ಕಾಮ್ಯಕಾ ॥ ವನದೆಡೆಗೆ ಬರುವುದನು ಪಾಂಡವ । ತನಯರೈವರು ಕಂಡು ಸ್ವಾಗತ । ಗೊಂಡು ಚಿನುಮಯನ ॥ ಮುನಿಯೊಡನೆ ಕರೆತಂದು ಪದಯುಗ । ವನಜವಲಿ ಶಿರವಾಂತು ಈರ್ವರ । ಕರ ಚರಣ ಕಮಲಗಳ ಜಲ ಸಿಂ । ಚನ ಗೈದು ನಮನ ॥ ೭೩ ॥

### ಝಂಪೆತಾಳ –

ಸಾನುರಾಗವೇ ಧರ್ಮ । ಸೂನು ದರ್ಶನದಿಂದ । ತಾನು ಕೃತ ಕೃತ್ಯನಹೆನು ॥ ಕಾನನದ ಕಷ್ಟ ವಿನಿ । ತಾನಂದದೊಳು ನೀವು । ಆನುವೊಡೆ ಧರ್ಮಾತ್ಮ ನೀನು ॥ ೭೪ ॥

ಅಜ್ಜನೆಮಗಿವನು ಕಡು । ದುರ್ಜನರ ಮರ್ದಿಸುತ । ಸಜ್ಜನರ ಪೊರೆಯಲವತರಿಪ ॥ ಕಜ್ಜವನು ಕೈಗೊಂಡ । ಮಜ್ಜನಕೆ ಅಮೃತ ಕರ । ದುಜ್ಜುಗದ ಪರ್ವವನು ಸೃಜಪ ॥ ೭೫ ॥

### ಮಾರವಿ – ಏಕತಾಳ –

ಜಗದೋದ್ಧರಣನು ಕಷ್ಟದಿ ನಿಮ್ಮನು । ಹಗಲಿರುಳಲೂ ಕಾವ ॥ ಪಗೆಗಳು

ಇಹರೆಂದೆಣಿಸದೆ ಜೀವಿಸಿ । ಪುಗೆ ನಿರ್ಮಲ ಭಾವ ॥ ೭೬ ॥ ಧರ್ಮವ ಬಿಡದತಿ ಸತ್ಯದಿಯಿರೆ ಯಮ । ಧರ್ಮನ ಸಂಜಾತ ॥ ಕರ್ಮಾಕರ್ಮದ ಫಲ ಕೊಡೆ ಹರಿಯಿಹ । ನಮ್ಮಯ ಸಂಗಾತ ॥ ೭೭ ॥ ಎನಲುರೆ ಪೀತಾಂಬರಧಾರಿಯು ಕ್ಷಣ । ಕುಣಿಯುತತೋಷಮಿಗೆ ॥ ಮುನಿಗಳು ಮಾರ್ಕಾಂಡೇಯರ ಪೂರ್ಣಾ । ದನುಗ್ರಹವಿರೆ ನಿಮಗೆ ॥ ೭೮ ॥

**ಏಕತಾಳ –**

ಬಾಳನು ನಡೆಸಲು ದೈವ ಬಲವು ಮುನಿ । ಮೌಳಿಯ ಹರಕೆ ಧರ್ಮ ಸಂಭವ ॥ ಸಾಲದೇ ನಿಮಗಿಂದು ವೀಕ್ಷಿಸಿ ಮಂಗಳ । ನಾಳಿನ ಶುಭೋದಯವ ॥ ೭೯ ೧/೨ ॥

ಕಲ್ಯಾಣಕರನಿಗೆ ಶಿವ ಶಂಕರಗೆ
ಕೈಲಾಸಪತಿಗೆ ಭವ ಕಾಪಾಲಗೆ ॥
ಮಂಗಳಂ – ಶುಭ ಮಂಗಳಂ ॥

# ವಾಲೀವಿಜಯ

– ಕೃತಿಕರ್ತರು –

ಜಿ. ಎಂ. ಭಟ್ಟ ಕೆ. ವಿ.

# ವಾಲೀವಿಜಯ

## ಭಾಮಿನಿ

ದಕ್ಷಿಣಾಮೂರುತಿಯ ಕುವರಗೆ । ಅಕ್ಷರಾದ್ಯಧಿ ದೇವತೆಗೆ ಪಾರ್ವತಿ । ತ್ರ್ಯಕ್ಷ ಸಖ ಬ್ರಹ್ಮಾದಿ ಸಜ್ಜನ । ರಕ್ಷಕರಿಗೆರಗೀ ॥ ಲಕ್ಷ್ಮೀದೇವಿಯ ಪ್ರಾರ್ಥಿಸುತ್ತಲಿ । ಇಕ್ಷುಚಾಪನ ಪಿತನ ದುರಿತವಿ । ಪಕ್ಷ ಸದ್ಗುರು ಮುಖ್ಯ ಕವಿಗಳ । ನೆನೆದು ಪೇಳುವೆನು ॥ ೧ ॥

## ಸೌರಾಷ್ಟ್ರ – ತ್ರಿವುಡೆ –

ಒಂದು ದಿನ ಅಮರೇಂದ್ರ ವೈಭವ । ದಿಂದ ದಿವಿಜರ ಸಭೆಯ ಕೂಡುತ । ಬಂದು ಹರಿವಿಷ್ಟರದಿ ಮಂಡಿಸಿ । ಚಂದದಿಂದ ॥ ೨ ॥

ಪುರವ ಗಣಿಕಾಂಗನೆಯರಾಗಲೇ । ಸುರಪತಿಗೆಚಾಮರವ ಬೀಸುತ । ಲಿರಲು ಸುಕ್ರಮದಿಂದಲೊಪ್ಪಿರೆ । ನರ್ತಕಿಯರು ॥ ೩ ॥

## ನರ್ತನ ಪದ್ಯ – ಸವ್ವಾ –

ಆಡಿದರಮರರ ಸಭೆಯೊಳಗೆ । ಗೀತವ । ಪಾಡುತ ನಮಿಸುವೊಲಾಧರೆಗೆ ॥ ಪಲ್ಲ ॥

ಕುಂಭ ಕುಚೆಯ ವರ । ಬಿಂಬಾಧರೆಯರು । ಸಂಭ್ರಮದಿಂದಲಿ । ಅಂಬುಜ ನಯನೆಯರ್ ॥ ೪ ॥ ಮಧುರ ವಸಂತದ । ಋತುವಿನ ಸಂತಸ । ಕುದುರಿದೆ ಭೂಜಗ । ಜನಮನದೊಳೆನುತ ॥ ೫ ॥ ಪ ॥

## ಕೇದಾರಗೌಳ – ಅಷ್ಟ–

ಲಾಲಿಸಮಾತ್ಯ ಮೂರ್ಲೋಕ ಪಾಲನ ಪೂರ್ವ । ಕಾಲ ಯಾಗದ ಪುಣ್ಯವು ॥ ಆಳರಸರಪಿಂದನೇಕ ಕಾಲದಿ ವೈರ । ದಾಳಿ ಸಾಗಿರೆ ಸೂತ್ರವು ॥ ೬ ॥

ಮದನನಯ್ಯನ  ಹರ ಕಮಲ ಪೀಠನ ದಿವ್ಯ । ಪದಯುಗ ಕೃಪೆಯಿಂದಲಿ ॥
ಅಧಿಕಾರ ವ್ಯಾಪ್ತಿಯು ಪುರುಷ ಪ್ರಯತ್ನದಿ । ಒದಗಿತು ಭಾಗ್ಯದಲ್ಲಿ ॥ ೭ ॥
ಉಳಿದುದೀವರೆಗಿಲ್ಲಿ । ವಿಧಿಯ ಕೈಬರೆಹವ । ತಿಳಿದವರಾರ್ ಜಗದಿ ॥ ಜಲಜ
ಸಂಭವ ತನ್ನ ಮನದೊಳಿರ್ದುದನೆಲ್ಲ । ನೆಲೆಗೊಳಿಸುವ ದೃಢದಿ ॥ ೮ ॥
ಎನಲೆಂದವರ ಚಿತ್ರಸೇನ ದಿವೌಕಸ । ರಿನಿಯನಿಗಹುದೆನ್ನುತ ॥ ತ್ರಿಣಯ ಮೀರನು
ಎನ್ನ ಮತವೆನೆ ದೇವಾದ್ಯ । ರನು ಕಳುಹಿಸಿದನಿತ್ತ ॥ ೯ ॥

## ಕಂದ

ಎನಲು ವರ ಚಿತ್ರಸೇನಂ । ಮನದಿ ಹರುಷವಾಂತಿರಲಾಗ ಸುರಪಂ ॥ ಘನ
ವೇಗದೊಳ್ ಸಭೆಯಂ । ಸನುಮತದಿ ಮುಗಿಸಿ ತೆರಳಿರಲಿತ್ತಲುಂ ॥ ೧೦ ॥

## ಕಾಂಬೋಧಿ – ಝಂಪೆ

ಒಂದು ದಿನ ಕಿಷ್ಕಿಂಧೆ ಭೂಪಾಲ ವೀರ ಕಪಿ । ವೃಂದವನು ಕೂಡಿ ಸಂತಸದಿ ॥
ಬಂದು ಗದ್ದುಗೆಯೊಳಗೆ । ಚಂದದಲಿ ಕುಳ್ಳಿರ್ದು । ಎಂದನಾ ಸಚಿವನೊಳು
ಮುದದಿ ॥ ೧೧ ॥
ಕೇಳಿರೈ ಸಚಿವೇಂದ್ರ ಜಾಂಬವಾದಿಗಳೆನ್ನ । ಮೂಲವಜ ಕಂಬನಿಯೊಳುದಿಸಿ ॥
ಬಾಳೀರ್ವ್ವೆನೀವರೆಗೆ ಬ್ರಹ್ಮವರಬಲದಿ ಕಪಿ । ಜಾಲಕಧಿಪತಿಯು ನಾನೆನಿಸಿ
॥ ೧೨ ॥
ಆದರೊಂದುಂಟೈ ಕುಮಾರರಿಲ್ಲದ ಕೊರಗು । ಬಾದಿಪುದು ಜೀವನದೊಳಿದಕೆ ॥
ಬೇಧವಿಲ್ಲದೇ ನೀವು ಸೂಚಿಸಿರಿ ದಾರಿಯನು । ಖೇದವಿರದೀತಲದಿ
ಬದುಕೆ ॥ ೧೩ ॥

## ಸಾಂಗತ್ಯ – ರೂಪಕ

ಪಥವಿದೇ ದೊರೆರಾಯ ವರ್ಣಭೇದದ ನೇಮ । ಕ್ಷಿತಿ ಪುರ ಪರಿವಾರಗಳನು ॥
ಸತತ ಧರ್ಮದಿ ಪೊರೆವ ಸದ್ಗುಣವರಸಂಗೆ । ಹಿತ ಪ್ರಜೆ ರಾಷ್ಟ್ರಾದಿಗಳನು
॥ ೧೪ ॥
ಆದರೊಳ್ಳಿತು ನಿನಗೆ ಜನ್ಮ ನೀಡಿದ ವಿಧಿಯಾ । ರಾಧನೆಯನು ವನದೊಳಗೆ ॥
ಭಾದೆಗಂಜದೆ ನೀನು ಏಕಾಗ್ರ ತಪಗಳ । ಗೈದರಭೀಷ್ಟ ಸಿದ್ಧಿಪುದು ॥ ೧೫ ॥

## ಭಾಮಿನಿ

ಅನುವಿದೆಂದೆ ನುತಾಗ ಸಚಿವನು । ಮಣಿಯಲಾಕ್ಷಣ ಮುಗಿಸಿ ಸಭೆಯನು । ಮನದಿ ನಿರ್ಣಯಗೈದ ತಪಗಳ । ನೆಸಗಿಬಹೆನೆಂದು ॥ ಇನಿತು ಅವಧಿಯಲಿಳೆಯ ಪಾಲಿಪ । ಘನತೆ ನಿನಗೆಂದೆನುತ ಮಂತ್ರಿಗೆ । ಕ್ಷಣದೊಳಪ್ಪಣೆಯಿತ್ತು ತವಕದಿ । ಪೊರಟನುದಯದೊಳು ॥ ೧೬ ॥

## ಶಂಕರಾಭರಣ – ತ್ರಿವುಡೆ

ಹಲವು ಗಹ್ವರ ಕಾನನಂಗಳ । ಕಳೆದುನದಿಗಳ ದಾಂಟುತ ॥ ತಲುಪಿದನು ಮೇರುವಿನ ಸನಿಹಕೆ । ಗಿರಿಯ ನಡರಿ ॥ ೧೭ ॥

ನೋಡಿ ಗಿರಿಯಲಿ ರಾಮಣೀಯಕ । ವಾದ ಮಾನಸ ಸರವನು ॥ ಮಾಡಿ ಸ್ನಾನವನೇಳೆ ದೇಹದಿ । ಭೇದವೊದಗಲು ತಿಳಿದನು ॥ ೧೮ ॥

ಕಂಡು ಪೆಣ್ಣಾದುದನು ವಿಸ್ಮಯ । ಗೊಂಡು ತಾನಾ ರಿಲ್ಲಿಗೆ ॥ ಬಂದು ಸಿಲುಕಿದನೇನ ಮಾಡಲಿ । ಯೆಂದು ಕುದಿದನು ಚಿತ್ತದಿ ॥ ೧೯ ॥

## ಪುನ್ನಾಗ – ಏಕತಾಳ

ಮಂದ ಮಾರುತ ಬೀಸುತಿರುವ ಝೋಂಪಿನೊಳು । ಅಂದು ಜೀವನ ಭಾವ ಮರೆತು ಸೌಖ್ಯದೊಳು ॥ ಪ ॥

ಕೆಂದಳಿರಿನ ಚೆಲ್ವ ಭವನ ಮಧ್ಯದೊಳು । ಕುಂದ ಮಲ್ಲಿಕ ಮಂಚ ಇಹುದೇ ಭ್ರಮೆಗಳು ॥ ಗಂಧ ಬೀರುತಲಿರ್ಪ ಪೂಗಳ ಸಿರಿಯು ॥ ಚಂದ ವೃಕ್ಷಂಗಳೋಳ್ ಸುತ್ತೀರ್ದ ಲತೆಯು ॥ ೨೦ ॥

ಅಮಮಾ ಏನ್ ಸೌಂದರ್ಯ ಬೆಡಗು ಬಿನ್ನಾಣ । ಭ್ರಮರ ಶುಕಂಗಳ ಝೇಂಕಾರ ಗಾನ ॥ ಕಮಲ ಮೊಗ್ಗಿಗೆ ಕಲ ಹಂಸದಾಗಮನಾ । ಕಮನೀಯ ವಿಟರಿಗೂ ದುರ್ಲಭ ತಾಣ ॥ ೨೧ ॥

## ಮಾರವಿ ಏಕತಾಳ

ಸುರಪತಿಯಿತ್ತ ವಸಂತ ವಿಹಾರದ । ಸರಸಕೆ ಮನದಂದು ॥ ಭರದೊಳು ಮೇರು ಕುಲಾಚಲಕಾಕ್ಷಣ । ಹರಿತಂದನು ನಲಿದು ॥ ೨೨ ॥

ಘನತೆಯೊಳನಿಮಿಷರೊಡೆಯನು ಬರುತಿರೆ । ವನವನು ಪರಿಕಿಸುತ ॥ ಕ್ಷಣದೊಳು ಮಿಂಚನೆಕಾಣಿಸಿ ತಿರುಗುವ । ವನಿತೆಯ ಕಾಣುತ್ತ ॥ ೨೩ ॥

## ಕಂದ

ಸುರಪನಚ್ಚರಿ ತಾಳುತಾ । ಬೆರಳ ಮೂಗಿನೊಳಿಡುತ ನಿಬ್ಬೆರಗಾದಂ ॥ ತರುಣಿಯ ಸೌಂದರ್ಯ ವ । ಪರಿ ಪರಿ ವರ್ಣಿಸಿ ಭ್ರಮೆಗೊಂಡೆಂಡಂ ॥ ೨೪ ॥

## ಕಾಪಿ – ಅಷ್ಟತಾಳ

ಯಾವ ಲೋಕದ ಪೆಣ್ಣಿವಳೋ । ಚೆಲುವೆ । ಯಾವ ಪುಣ್ಯಾತ್ಮೆಯ ಮಗಳೋ ॥ ಯಾವ ಭವದ ಸೌಭಾಗ್ಯವಿದೋ । ಈಗ । ಲೀ ವನಿತೆಯ ನೋಡೆ ಚೋದ್ಯ ಕಾಣುವದೋ ॥ ೨೫ ॥

ನೇತ್ರಗಳಿವಳ ಚೆಲ್ವಿಕೆಯ । ಸವಿದ । ಮಾತ್ರದಿ ದಣಿಯವು ಸುಂದರ ಮೈಯ ॥ ಗಾತ್ರದುನ್ನತ ಸ್ಪರ್ಶ ಸುಖವ ॥ ಚಾರು । ನೇತ್ರೆ ಕೊಟ್ಟರೆ ಧನ್ಯ ನೀ ಮಘವಾ ॥ ೨೬ ॥

ಒಮ್ಮೆ ಈಕೆಯು ನುಡಿ ಮುತ್ತ । ಹೊರ । ಹೊಮ್ಮಿಸೆ ಭುವಿಗೆ ಬೀಳದ ತೆರೆ ॥ ಕೊಳುತ । ಸುಮ್ಮನೇತಕೆ ಪೋಪೆಯೆನುತ । ಕರೆದು । ಗಮ್ಮನೀಕೆಯ ತುಟಿಗೆ ಮುತ್ತನೆ ಕೊಡುತ ॥ ೨೭ ॥

ಅಂಗನೆಯ । ಳ ಅಂಗಗಳೊಂದು । ಪರಿದು । ಸಿಂಗ ಕಟಿಯ ಮೇಲೆ ಮನವಾಗುತಿಹುದು ॥ ಮಂಗಲೆಯಳ ಬೇಗ ಕರೆದು । ಅವ । ಳಿಂಗಿತ ತಿಳಿಯುವೆ ಎನುತ ಮುಂದರಿದು ॥ ೨೮ ॥

## ಸುರಟಿ–ಏಕತಾಳ

ನಿಲ್ಲೆಲೆ ನೀ ತರುಣಿ । ಎನ್ನಯ । ಸೊಲ್ಲನು ಕೇಳ್ ರಮಣಿ ॥ ಫುಲ್ಲ ನಯನೆ ನಿನ । ಗೆಲ್ಲಿಯ ದೇಶವು । ಇಲ್ಲಿಗೇಕೆ ಬಂದಂದವ ತಿಳುಹಿಸು ॥ ೨೯ ॥

## ಕಾಂಬೋಧಿ – ಏಕತಾಳ

ವೀರ ನಿನ್ನ ಪೆಸರದೇನು । ಭೋರನೈತಂದಿರುವ ಮೂಲ । ಕಾರಣವ ಪೇಳೆನ್ನ ತಂದೆ । (ಹೇಮ ಬೀಜನು ) ಸೃಷ್ಟಿ ಕರ್ತನು ॥ ೩೦ ॥

## ಸುರಟಿ ಏಕತಾಳ

ಜಾಣೆ ನಿನ್ನ ಬೆಡಗು । ಬಿಡು ಸುಮ । ಬಾಣನಿಂದ ಪಿಡುಗು ॥ ಕಾಣೆ ನಿನ್ನ ವರ ರೂಪಕೆ ಬಳಲಿದೆ । ರಾಣಿಯಾಗಿ ನೀ ದಾಹವ ತಣಿಸೈ ॥ ೩೧ ॥

## ಕಾಂಬೋಧಿ – ಏಕತಾಳ

ಕಂಡ ಕಂಡ ನಾರಿಯರನು । ಭಂಡು ಮಾಡಿ ತಮ್ಮ ಬಯಕೆ । ಯುಂಡು ಪೋಪ ಪುರುಷರನ್ನು । ನಂಬೆ ನಾನೀಗಾ ॥ ೩೨ ॥

## ಕೇದಾರ ಗೌಳ – ಅಷ್ಟತಾಳ

ಹೀನ ಗಂಡಸು ಎಂದು ನಿಂದಿಸದಿರು ಎನ್ನ । ನಾನಿರ್ಜರಾಧಿಪನು ॥ ಭಾನು ಸಾಕ್ಷಿಯು ಕೇಳು ಶ್ರೇಷ್ಠ ನಾನಾಗಿಹೆ । ಪ್ರಾಣವನುಳಿಸು ನೀನು ॥ ೩೩ ॥ ಅನಿಮಿಷರೊಡೆಯನೆ ನಿನ್ನ ಧಿಕ್ಕರಿಸುವ । ವನಿತೆ ನಾನಲ್ಲ ಕೇಳು ॥ ಮಿನುಗುವ ಪ್ರಾಯವು ಪುರುಷರಾಧೀನವು । ಎನಲಾಕೆ ತೋಷದೊಳು ॥ ೩೪ ॥

## ಭಾಮಿನಿ

ಅಬಲೆಯೊಪ್ಪಿದಳರರೆ ಧನ್ಯನು । ಉಭಯ ಮನವೊಂದಾಯ್ತೆನುತ ಕುಣಿ । ದಭಿಗಮಿಸಿ ನಿರ್ಭಯದಿ ಕರದಿಂ । ಕಬರಿಯನು ಸವರೆ ॥ ಅಬುಜ ನಯನೆಯು ಸ್ಮರನಿಗಳುಕುತ । ಇಭಗಮನೆ ಬಳಲುತ್ತಲಿಂದ್ರನ । ಅಭಿಸರಿಸಿ ಸ್ವೇಚ್ಛೆಯೋಳ್ ರಮಿಸುತ । ಅರ್ಭಕನ ಪಡೆಯೆ ॥ ೩೫ ॥

## ಮಧು ಮಾಧವಿ – ತ್ರಿವುಡೆ

ಶಚಿವರನ ಗಮನವನು ತಿಳಿಯುತ । ಶುಚಿಯ ನಿರ್ಮಿಸಿ ಶಿಶುವ ಮುದ್ದಿಸು । ತಚಲದೊಳು ತಾನಿಡುತಲೀಕ್ಷಿಸೆ । ಖಚರನುದಯದ ಸೊಬಗನು ॥ ೩೬ ॥

## ನಾದನಾಮ ಕ್ರಿಯೆ – ಏಕತಾಳ

ಕಂಡು ಬಾಲೆಯ ಭಕ್ತಿ ಭಾವಕೆ । ಸೂರ್ಯ । ಬಂದಿಳಿದನು ಮೇರು ಶೈಲಕೆ ॥ ಅಂದವಾಗಿಹ ಪುಷ್ಪ ವನಗಳ । ಚೆಂದ । ದಿಂದ ಕಾಣುತ ತಾಳಿ ಭ್ರಮೆಗಳ ॥ ೩೭ ॥

## ಭೈರವಿ – ಝಂಪೆ

ಚಕಿತನಾಗುತ್ತ ರವಿ । ಅಕಟ ನೀನೇಕೆಂತು । ಭಕುತಿಯಲಿ ಭಜಿಪೆಯೆನೆ । ಪ್ರಕಟಿಸಿದಳವಳು ॥ ೩೮ ॥

ಚೆನ್ನ ವರ್ಣದಿ ಮೆರೆವ । ನಿನ್ನುದಯ ರಮಣೀಯ । ಕಣ್ಣು ಕೋರೈಪ ವಿಧ । ವನ್ನು ನೋಡಿದೆನು ॥ ೩೯ ॥

ನಿನ್ನ ಸುಡು ರಶ್ಮಿಗಳು । ಎನ್ನ ದೇಹದೊಳವಿತು । ಬನ್ನವನು ಕಳೆದು ಮುದ । ವನ್ನು ಸೂಸಿತೆನೆ ॥ ೪೦ ॥

ಬರ ಬರುತ ನಿನ್ನ ತನು । ಮಿರುಗು ಸುಮಶರನ ಶರ । ಬರಲು ಯೆಡೆ ಮಾಡಿತದು । ಸರಸಿ ಜಾಂಬಕೆಯೆ ॥ ೪೧ ॥

ಕಾಯದಾಕರ್ಷಣೆಯ । ಪ್ರಾಯ ಮಧುರಸ ಹೀರ್ವಂ । ತಾಯಿತದು ಮುಂದೇನು । ಪಾಯ ಪೇಳೆನಲು ॥ ೪೨ ॥

## ವಾರ್ಧಿಕ–ಷಟ್ಪದಿ

ಮಾತನಾಡದೆ ತನ್ನ ಸೋತು ನೋಡುತ್ತಿರುವ । ಆ ತರಳೆಯನು ದಿನಪ ಸೋತು ನಲವಾಂತು ಶಿರ । ವಾ ತತೂಕ್ಷಣವೆತ್ತಿ । ಪೂತ ಕಂಠದಿ ಕರವ । ನಾ ತಪನ ಆಡಿಸಲ್ಕೆ ॥ ಕಾತರದಿ ಮನವಾಂಥಿ ।  ತಾರ್ಥವನು ತಿಳುಹೆ ಸತಿ । ಆ ತನು ಗಳೊಂದಾಗಲಾತುರದಿ ರಮಿಸಿ ಮಿಗೆ । ಜಾತನನು ಪಡೆಯೆ ರವಿ । ಪ್ರೀತಿಯಲಿ ನಿರ್ಗಮಿಸ । ಲೈತಂದನಬುಜಭವನು ॥ ೪೩ ॥

## ರೂಪಕ

ಸೃಷ್ಟಿಕರ್ತನೇ ಎನ್ನ । ಸೃಷ್ಟಿಸಿ ಈ ಪರಿ । ಕಷ್ಟದಿ ಬದುಕಲೆಂತು । ನಾನಿನ್ನು ॥ ತಟ್ಟನೇ ಮೈದೋರಿ । ಪೋಗದಿರಲು ನಾನೀಗ । ಬಿಟ್ಟಪೆ ಪ್ರಾಣವನ್ನು ॥ ೪೪ ॥

## ಬೇಗಡೆ–ಅಷ್ಟತಾಳ

ನಾರಿ ಪರಿತಪಿಸುತ್ತ ಬ್ರಹ್ಮನನು । ಬಹು ಧ್ಯಾನಿಸುತ ಮೈ । ದೋರಿದಂಥವನಿಂಗೆ ನಮನವನು ॥ ಭೂರಿ ಭಕ್ತಿಗಳಿಂದಲರ್ಪಿಸಿ । ತೋರಿಸುತ ಬಾಲರನು ವಿಷಯವ । ವಾರಿಜಾಸನನಿಂಗೆ ಪೇಳುತ । ಲಾರಮಣಿ ಕಂಬನಿಯ ಸುರಿಸಲು ॥ ೪೫ ॥

ನೇತ್ರದಂಬುವನೊರೆಸಿ ಜಲರುಹಜ । ಸಂತಯಿಸಿ ಕೋಮಲ । ಗಾತ್ರೆಗೆಂದನು ನೀನು ಋಕ್ಷರಜ ॥ ಪುತ್ರ ರಿಚ್ಛೆಯೊಳಿಳಿಯೆ ಕೊಳದೊಳು । ಪಾತ್ರ ಬದಲಿರೆ ಬಂದು ಕಾಮಿಸೆ । ಗೋತ್ರ ವೈರಿಯ ಕೂಡುತಲಿ ಶುಭ । ಗೋತ್ರೆ ನೀನೀ ಶಿಶುವ ಪಡೆದಿಹೆ ॥ ೪೬ ॥

ಸೂರ್ಯ ನಿನ್ನನು ಕಂಡು ಪ್ರೇಮಿಸಲು । ನೀ ಪಡೆದೆ ಇವನನು । ಶೌರ್ಯವಂತನು ನಿಜವು ಪೃಥುವಿಯೊಳು ॥ ಧೈರ್ಯದಿಂ ಕಾಸಾರ ಸ್ನಾನದಿ । ಪೂರ್ವ ರೂಪವ ಹೊಂದಿ ಪುರವನು । ಸೇರಿ ನೀನಲ್ಲಿರ್ದು ಬಾಳನು । ಭಾರ್ಯೆಯೊಂದಿಗೆ ಕಳೆಯೋ ಹರುಷದಿ ॥ ೪೭ ॥

ಲಾಲಿಸೈ ವರ ವಾರಿಜೋದ್ಭವನೇ । ಕುವವರಿಗೆ ನಾಮವ । ಪಾಲಿಸೈ ತವ ಮುಖದಿ ವಾಗ್ವರನೇ ॥ ಕಾಲಕಾಲಕು ನಿನ್ನ ಕೃಪೆಯೊಳು । ಬಾಳ ನಡೆಸುವೆ ನೆನಲಿಕೆಂದನು । ವಾಲಿಯೊರ್ವ ಸುಗ್ರೀವನೋರ್ವನು । ಪಾಲಿಸೆಂದೆನುತದ್ರುಶನಾಗಲು ॥ ೪೮ ॥

## ದ್ವಿಪದಿ

ಪದುಮ ಪೀಠನು ಪೇಳ್ದ । ನುಡಿಯ ನೆನಹಿನೊಳು । ಸುದತಿ ಸ್ನಾನವ ಗೈದು । ಇರಲು ನೆರಳಿನೊಳು ॥ ೪೯ ॥

ಮರಳಿ ಪುರುಷತ್ವವನು । ನೋಡಿ ಚಕಿತದೊಳು । ತರಳರೀರ್ವರ ಕೊಂಡು । ತಿರುಗಿ ಹರ್ಷದೊಳು ॥ ೫೦ ॥

ಅರಸ ಕಿಷ್ಕಿಂಧೆಯಾ । ನಗರಿಗೈತರಲು । ಪುರದ ಜನರೆಲ್ಲ ಸ್ವಾ । ಗತಿಸಿ ಕರೆತರಲು ॥ ೫೧ ॥

ಕೆಲವು ಕಾಲಾಂತರದಿ । ತನ್ನ ಮಡದಿಯೊಳು । ನಲವಿನಿಂದಂಜನೆಯ । ಪಡೆಯೆ ಸೌಖ್ಯದೊಳು ॥ ೫೨ ॥

## ಸೌರಾಷ್ಟ್ರ – ತ್ರಿವುಡೆ

ಋಕ್ಷರಜ ಭೂಪಾಲನೊಂದಿನ । ದಕ್ಷ ತನಯರ ಪರಿಕಿಸಲು ಸಭೆ । ತಕ್ಷಣದಿ ನೆರಹಲ್ಕೆ ಕಪಿಗಳ ಕಕ್ಷೆಯೊಳಗೆ ॥ ೫೩ ॥

## ಮಾರವಿ – ಏಕತಾಳ

ಹರಿ ತಂದೊಡ್ಡೋಲಗದೊಳು ಮಂಡಿಸಿ । ಅರುಹಿದ ಸಚಿವನೊಳು ॥ ತರಳೆಯಂಜನೆಯನು ವಿಭವದೊಳಾ ಕೇ । ಸರಿ ಕಪಿವರಗಿತ್ತು ॥ ೫೪ ॥

ಮದುವೆಯ ವಿರಚಿಸಿ । ಮದನಾರಿಯ ಕೃಪೆ । ಒದಗಲು ಸುತರಿಂಗೆ ॥ ವಧುಕರ ಗ್ರಹಣೋತ್ಸವನು ಗೈದುರೆ । ಬದುಕಿದೆನೀವರೆಗೆ ॥ ೫೫ ॥

ಈ ನಗರದ ಪ್ರಜೆ ಪರಿವಾರಂಗಳ । ಮಾನದಿಂದಾಳಲಿಕೆ ॥ ಭಾನುಜನಗ್ರಜ ವಾಲಿ ಸಮರ್ಥನೇ । ನೀನರುಹಿಂದೆನಗೆ ॥ ೫೬ ॥

ಎಂದೆನಲಾ ಸಚಿವೇಂದ್ರನು ಪೇಳಿದ । ಇಂದ್ರ ಕರುಣೇಯರರೇ ॥ ಇಂದಿಗೆ ವಾಲಿಯ ಸಾಹಸದೆದುರಿಗೆ । ಬಂದು ನಿಲುವರಿಹರೇ ॥ ೫೭ ॥

## ಕಂದ

ಭಲರೇ ಮೆಚ್ಚಿದೆ ಮಂತ್ರಿಯೆ । ಕಲಿಸುತರಂ ಕರೆಸೀಗಳ್ ನೀನೆನೆ ಸಚಿವಂ ॥ ತಳುವದೇ ಚರರನು ಕಳುಹಲ್ । ಚಳಕದಿ ಕರೆತರೆ ಪೊರಟರ್ ವಾಲಿಯ ಬಳಿಗಂ ॥ ೫೮ ॥

## ವಾಲಿ – ಸುಗ್ರೀವರ ಪ್ರವೇಶ

## ಸೌರಾಷ್ಟ್ರ – ತ್ರಿವುಡೆ

ಶಕ್ರ ಸುಕುಮಾರಕನು ಭವನದಿ । ವಿಕ್ರಮವ ಸೋದರಗೆ ಪೇಳಲು । ಪಕ್ರಮಿಸಿ ಭಾನುಜನೆ ಕೇಳ್ಳೈ । ಸೊಕ್ಕಿಯೆನ್ನ ॥ ೫೯ ॥

ಅಘಟಿಗಾನುವರುಂಟೆ ಲೋಕದಿ । ವಿಧವ ಕಾಣದೆ ಎನ್ನ ಕೆಣಕಲು । ಮಧು ರಿಪೋತ್ತಮ ಬಂದರೇನ್ನೈ । ಬೆದರೆಯೆನಲು ॥ ೬೦ ॥

ಅರಸನಾಜ್ಞೆಯನರುಹಿ ಮಣಿಯುವ । ಚರನ ಕಳುಹಿಸಿಯನುಜ ಸಹಿತಲಿ । ಭರದಿ ಸಭೆಗೈತಂದು ಜನಕನ । ಚರಣಕೆರಗೆ ॥ ೬೧ ॥

## ಜಂಜೂಟಿ – ಅಷ್ಟತಾಳ

ಚರಣಕ್ಕೆ ಮಣಿದ ಸುಪುತ್ರರ । ಎತ್ತಿ । ಪರಸಿ ತಳ್ಕಿಸುತವರೀರ್ವರ ॥ ಪುರು ಹೂತನನುಗ್ರಹದೊಳಗೆ ನಿಮ್ಮನು ಪಡೆ । ದಿರುವೆ ಕುವರರೇ ಇನ್ನು ರಾಜ್ಯವ ।

ಪೊರೆವ ಭಾರವು ನಿಮ್ಮದೈಸಲೆ ॥ ೬೨ ॥
ಎನಲು ಕರಂಗಳ ಮುಗಿದು । ಪೇಳ್ದರ್ । ಜನಕ ಕೇಳೆಮ್ಮ ಬಿನ್ನಹವಿಂದು ॥ ಮನದೊಳೆಣಿಸಿದುದ ಕವಲು ಮಾಡುವರಲ್ಲ । ಘನತರದ ಪುಣ್ಯಂಗಳಿಂದಿರೆ । ಕನಸು ನನಸಾಗುವದು ತಂದೆಯೆ ॥ ೬೩ ॥
ಇಂದ್ರಜಾತನ ನುಡಿಗಳನು । ಮೆಚ್ಚಿ । ತಂದಿಟ್ಟನವಗೆ ಕಿರೀಟವನು ॥ ಇಂದಿಗೆನ್ನಯ ಭಾರ ತೀರಿತೆನ್ನುತಲವ । ಚಂದದೊಳಗಾಯುಧವ ಕೈಯಲಿ । ತಂದು ಪಿಡಿಸಲು ಭರದಿ ಪೊಗಳುತ ॥ ೬೪ ॥
ತರಣಿ ನಂದನ ಕೇಳು ಮಾತ । ಅಣ್ಣ । ಧರೆಯ ಪಾಲಿಸಲನವರತ ॥ ನೆರಳಿನಂತೆಯೇ ಸಾಗಿ ಪುರದ ರಕ್ಷಣೆಯನ್ನು । ಸರುವ ಕಾಲಕು ನೀತಿಯಿಂದಲೇ । ಪೊರೆದು ಕೀರ್ತಿಯಗಳಿಸಿಯೀರ್ವರು ॥ ೬೫ ॥

## ಭಾಮಿನಿ

ಕುವರರನು ಬೀಳ್ಗೊಟ್ಟು ಸಭೆಯನು । ಅವನಿಪತಿ ಕಳುಹುತ್ತಲಂದಿನ । ಲವಲವಿಕೆಯೊಳ್ನಿಜಗೃಹದಿ ನಿಶಿ । ಕಳೆದು ಉದಯದಲಿ ॥ ರವಿಗೆರಗಿ ಹರಿಪೀಠಕೊಂದಿಸಿ । ಯುವತಿಯಳನೊಡಗೊಂಡು ಪ್ರಜೆಗಳ । ನಿವಹವನು ಸಂತವಿಸಿ ತೆರಳಿದ । ತಪಕೆ ವನದೆಡೆಗೆ ॥ ೬೬ ॥

## ಪುನ್ನಾಗ – ಅಷ್ಟತಾಳ

ಇತ್ತಲಾ ವಾಲಿಯು ಕಾಲಾಂತರದಲಿ । ಚಿತ್ತದೊಳುಬ್ಬೇರಿ ನುಡಿದನೋಲಗದಿ ॥ ಪಲ್ಲ ॥ ಸಪ್ತ ಸಾಗರ ನೀರ ಮಿಂದು ನಿತ್ಯದೊಳು । ಆಪ್ತೇಷ್ಟರೊಡನತಿ ಸುಖದೀ ಬಾಳಿರಲು ॥ ಗುಪ್ತವಾದರು, ದೇವಾಸುರರು ಕಿನ್ನರರು । ಸುಪ್ತವಾದ ಮೃತವ ಪಡೆವ ಕಾಲದೊಳು ॥ ೬೭ ॥ ಮಂದರಾದ್ರಿಯ ನೆಗಹಿ ಸಲಿಸೆ ಸೇವೆಯನು । ಇಂದ್ರನಿತ್ತನು ವೈಜಯಂತೀ ಮಾಲೆಯನು । ಕಂದನೆನ್ನುತ ವಿಷ್ಣು ಬಲುವರವಿತ್ತಾ । ಮುಂದೆನಿಂದರ ಶಕ್ತಿ ಕ್ಷಯವಾಗಲೆನುತ ॥ ೬೮ ॥
ದೈವಾನುಗ್ರಹದಿಂದ ಇರಲು ನಾವಿನ್ನು । ಯಾವ ದುಷ್ಟನು ತಾನು ನಮ್ಮ ವಂಚಿಪನು । ನ್ಯಾಯ ನೀತಿಗಳಿಂದ ಆಳ್ವೆವೀಧರೆಯ । ಯಾವ ನ್ಯೂನತೆಯಿದೆ ಪೇಳಿರಿ ಬಗೆಯ ॥ ೬೯ ॥

### ತುಜಾವಂತು – ಮಟ್ಟೆತಾಳ

ನುಡಿಯ ಕೇಳಿ ಮೋದವಾಯ್ತುರೇ । ಬಲು ಬಲವು ಕೀರ್ತಿ । ಪಡೆದೆ ಅಗ್ರ ಭವನೇ ಪೂತುರೇ ॥ ಪಲ್ಲ ॥ ಕಡಲ ಮಥನ ಸಹಸ ಪರಿಗಳ । ತೋರ್ದ ನಿನಗೆ । ಮೃಡ ರಮೇಶ ಸುರರು ವಿಧಿಗಳ ॥ ಮುಡುಪು ವರವ ಕರುಣದಿಂದ । ಪಡೆವ ಭಾಗ್ಯ ಲಭಿಸೆ ನಮ್ಮ । ಅಡವಿ ಚರರ ಕುಲವು ಧನ್ಯ । ಕಡುಬಲಾಢ್ಯರೆನಿಪ ಪೆಸರ್ಗಳ ॥ ತಂದ ಮಹಿಮ । ಕುಡಿಲು ಭಕ್ಷರೊಡೆಯನಹುದೇಲ ॥ ೭೦ ॥

ಜಾಂಬವಾದಿ ಜ್ಞಾನ ವೃದ್ಧರೆ । ನಗರದೇಳ್ಗೆ । ಕಾಂಬ ಕಾಲ ಸನಿಹವಾಯ್ತರೇ ॥ ನಂಬಿಯಿದನು ಮನದ ಕವಲಿ । ಗಿಂಬನಿಡದೆ ನೀವು ಅಣ್ಣ । ನೆಂಬ ಮಮತೆಯಲ್ಲಿ ನಿಜವು । ಶಂಭು ಸಮರ ಗೈದೊಡಾಗಳು । ಬೆದರ್ವನಲ್ಲ । ವೆಂಬ ದೃಢತೆಯಿರ್ಪು ದೆಮ್ಮೊಳು ॥ ೭೧ ॥

ಅಣ್ಣ ನಿನ್ನ ಪುಣ್ಯವತಿಶಯ । ಜಿಹ್ವೆಯೊಂದು । ಬಣ್ಣಿಸಲ್ಕೆ ಬರದು ನಿಶ್ಚಯ ॥ ಗಣ್ಯರಾರೂ ಮಾಡದಂಥ । ಮಾನ್ಯ ಕಾರ್ಯವೆಸಗಿ ಕುಲದಿ । ಮಣ್ಣು ಸೂರ್ಯ ಚಂದ್ರರಿರ್ಪ । ಅನ್ನೆಗಂತು ನಲಿವ ಕೀರ್ತಿಯ । ತಂದೆಯೆನಲು । ಸನ್ನುತಿಯೊಳೇ ಮುಗಿಸಿ ಗೋಷ್ಠಿಯ ॥ ೭೨ ॥

## –ಮಾಯಾವಿ ಪ್ರವೇಶ –

### ಸೌರಾಷ್ಟ್ರ – ತ್ರಿವುಡೆ

ಇತ್ತಲಾ ಮಾಯಾವಿ ತನ್ನಯ । ಪತ್ತನದಿ ಮಂತ್ರಿಯನು ಕರೆಯುತ । ಪೃಥ್ವಿಯೊಳು ಜೋಡಿಲ್ಲ ತನಗೆಂ । ನುತ್ತ ನುಡಿದ ॥ ೭೩ ॥

ತಂದೆಯಾಗಿಹ ಮಯನು ಮತ್ತಾ । ದುಂಧುಭಿಯು ಸಹ ಭವನು ವೀರನು । ಅಂದದಲಿ ಮಿಗಿಲೆನಿಸಿ ಓರ್ವಳು । ತಂಗಿಯಿಹಳು ॥ ೭೪ ॥ ನಾಮ ಮಂಡೋದರಿಯು ಲಂಕೆಯ । ಭೂಮಿ ಪಾಲಕ ರಾವಣೇಶ್ವರ । ನಾ ಮಹಿಮನೇ ಭಾವ ನಮಗಿದೆ । ಸ್ನೇಹ ಬಲವು ॥ ೭೫ ॥ ಅಗಣಿತಷ್ಟೈಶ್ವರ್ಯ ಸಂಪದ । ವಗಜೆ ಕಾಂತನ ದಯವು ಮೇಲ್ ತ್ರೈ । ಜಗವ ಸಂಚರಿಪಂಥ ಶಕ್ತಿಯ । ಬಗೆಯ ನೋಡು ॥ ೭೬ ॥

ಕೊರತೆಯೇನ್ನೈ ಯೆನಗೆ ಪೇಳೆನ । ಲೊರೆದು ಅಸ್ತೆಂದನಲು ಮಯಸುತ ।

ಭರದಿ ಸಚಿವನ ಕಳುಹಿ ಮಲಯಕೆ । ಬರಲಿಕತ್ತ ॥ ೭೭ ॥

## ಬೇಗಡೆ – ಅಷ್ಟತಾಳ

ಬಂದಳು ಸಡಗರದಿಂದೊಲಪಿನಲಿ । ಚಂದದಿ ಸಖಿಯರ ವೃಂದ ಕೂಡುತಲಿ । ಸುಂದರವದನೆಯು ಮಂದ ಹಾಸದಲಿ । ಚಂದಿರ ತಾರೆಯವಿಂಡಿನಂದದಲಿ ॥ ೭೮ ॥

## ಸುರಟಿ – ರೂಪಕ

ಉರಗವೇಣಿ ಸೊಬಗಿನಿಂದ । ಮೆರೆವ ಸಖಿಯರೇ ॥ ಉರಗ ಗಮನದಿಂದ ಬಂದ । ಸರಸ ವತಿಯರೇ ॥ ೭೯ ॥

ಅರಸಿ ನಿನ್ನ ನಡೆಯ ಭಾವ । ವರಸಿ ನೋಡಲು । ಅರಸಲೋರ್ವನರಸನನ್ನು । ಅರಸಿಯಾಗಲು ॥ ೮೦ ॥

ಮಲಯ ಶಿಖರ ವನದಿ ವಿಹರಿ । ಸಲಿಕೆ ಮನವದು । ಚಲಿಪುದೀಗ ನಡೆಯಿರೆನಲು । ನಳಿನ ಮುಖಿಯರು ॥ ೮೧ ॥

ಬಾಲೆಯಿಂದು ಸಮಯವಲ್ಲ । ಕಾಲು ಎಡವಿತು ॥ ಕೇಳಿ ಕಿವಿಯಗೊಡದೆ ಗಾನ । ಲೋಲೆಸರಿದಳು ॥ ೮೨ ॥

## ಶಂಕರಾಭರಣ – ತ್ರಿವುಡೆ

ನೋಡಿರೆಂದೆನುತಾಗ ಕರಗಳ । ಜೋಡಿಸುತರವರೆಲ್ಲರು ॥ ಗಾಢದಿಂದಲೆ ಜವದಿ ಸಖಿಯರ । ಕೂಡಿ ಬಂದು ॥ ೮೩ ॥

## ಶಂಕರಾಭರಣ –ಅಷ್ಟತಾಳ

ಕಂಡರಾ ಪೂಗೊಂಚಲ । ಮುತ್ತಿಹ ಅಳಿ । ವಿಂಡಿನಾ ಧ್ವನಿ ಚಂಚಲ । ಪುಂಡರೀಕಾಕ್ಷ ಕುಮಾರನ ಸುಮಶರ । ದಂಡಿಪುದಿಂದಿನಲಿ ॥ ಮಂದಾನಿಲ ॥ ೮೪ ॥

ನೋಡಿತ್ತ ಸಖಿ ಬೀಸುವ । ಝೋಂಪಿನೊಳೆನ್ನ । ಕಾಡುವ ಸುಮಬಾಣವ ॥ ಗಾಢಣೆ ಸಹಿಸಲಸಾಧ್ಯವಾಗಿಹುದೀಗ । ಪಾಡೇನು ಮುಂದೆಪೇಳಿ ॥ ಈ ವನ ಕೇಳಿ ॥ ೮೫ ॥

ಪೆಣ್ಗಳ ಸ್ವರ ಕೇಳುತ । ಮಯಸುತ ಜಿಗಿದು । ಸಣ್ಣವಳನು ಕಾಣುತ ॥ ಚಿಣ್ಣ ಜವ್ವನೆಯಳ ಕೊಂಡೊಯ್ದು ನಾಮನ । ದನ್ನೆಯಳನು ಮಾಳ್ಪೆನು ॥ ಇನ್ನೇನೂ ॥ ೮೬ ॥

## ಕಾಂಬೋಧಿ – ಝಂಪೆ

ದೂರದಲಿ ನಸುನಗುವ । ನಾರಿಯಳ ಕಾಣುತ್ತ । ತಾರೆಗಳ ಮಧ್ಯದೊಳಗೆ ॥ ತೋರ್ಪ ಚಂದ್ರನ ಬೆಳಕ । ಬೀರುವೀ ಚೆಲ್ವಿಕೆಯ । ನಾರಿ ಯಾರಿವಳೆಂದು ಭ್ರಮಿಸಿ ॥ ೮೭ ॥

ಮೋಹಿಸುತ ಮೈ ಮರೆದು । ಕಾಮಭಾದೆಯೊಳಿವಳ । ತಾ ಹಿಡಿಯಲೋಸುಗವೆ ತಡೆದ ॥ ಮೋಹನಾಂಗಳು ಬೆದರಿ । ದೂರ ಸರಿ ನೀನೆಂದು । ತಾ ಹಿಂದೆ ನಿಂತೆಂದಳವಳು ॥ ೮೮ ॥

## ಧನ್ಯಶ್ರೀ – ಏಕತಾಳ

ಜೋಕೆ ಎನ್ನ ಮುಟ್ಟ ಬೇಡ । ಸಾಕು ಭಂಡ ಖಳನೆ । ಕಾಕುಮಾತನಾಡದೀಗ । ಪೋಕ ಪೋಗು ಸುಮ್ಮನೆ ॥ ೮೯ ॥

## ಕಾಂಬೋಧಿ – ಝಂಪೆ

ಇನ್ನು ಸಹಿಸೆನು ಮದನ । ಬನ್ನಣೆಯವುಳಿಸು ನೀ । ನಿನ್ನು ತಡ ಮಾಡಿದರೆ ಮುಂದೆ ॥ ಎನ್ನ ಪ್ರಾಣವ ನಿಲ್ಲಿ । ಮುನ್ನ ಕಳೆಯುವೆನೆಂದು । ಚೆನ್ನಾಗಿ ಸೋತು ಬೇಡಲ್ಕೆ ॥ ೯೦ ॥

## ಧನ್ಯಶ್ರೀ – ಏಕತಾಳ

ಪರರ ಹೆಣ್ಗೆ ಮೆಚ್ಚಿ ನೀನು । ನರಕಕಿಳಿವೆ ಪಾಪಿ ॥ ಸರಿಯೋ ದಾರಿ ಬಿಟ್ಟು ಬೇಗ । ತೆರಳಿ ಮುಂದೆ ಪೋಪೆ ॥ ೯೧ ॥

## ಮಾರವಿ –ಏಕತಾಳ

ಪೋಗುವದೆಲ್ಲಿಗೆ ನೀ ಲಲಿತಾಂಗಿಯೆ । ಬಾಗದೆ ಮಮ ನುಡಿಗೆ ॥ ಈಗಳು ನಿನ್ನನು ನಾ ಬಲವಂತದಿ । ಬೇಗ ದೊಳ್ಳೈದು ಮಿಗೆ ॥ ೯೨ ॥ ಕೂಡುತ

ಲೆನ್ನಯ ಮನದಾಭೀಷ್ಟವ । ಗಾಢದಿ ಪೂರೈಸಿ ॥ ಹಾಡುವೆ ಜೀವನ ಗಾನವಯೆನುತಲಿ । ಹೂಡುತ ಮಾಯಕವ ॥ ೯೩ ॥ ಯೇರಿಸಿ ತನ್ನಯ ಪೆಗಳೊಳಗಾಕ್ಷಣ । ಭೋರ್ಗುಡಿಸುತ ಖಳನು ॥ ಸಾರುವೆ ತನ್ನಯ ಪಟ್ಟಣಕೆಂದತಿ । ಭೋರನೆ ಎಳೆದ್ಯೊದ ॥ ೯೪ ॥

## ನೀಲಾಂಬರಿ – ಆದಿತಾಳ

ಆಗಸ ಮಾರ್ಗದೊಳು । ಕೊಂಡೊಯ್ವಾಗ । ತಾ ಗೋಳಿಟ್ಟಳುತವಳು ॥ ಪಲ್ಲ ॥ ಧರೆಯೋಳ್ಹೆಣ್ಣಿನ ಜನ್ಮವು । ಸರ್ವಥ ಬೇಡ । ಪರಮ ಪಾಪದ ಫಲವು ॥ ದುರುಳರ ಚೈತನ್ಯವು । ಈ ವಿಧ ವ್ಯರ್ಥ । ದುರುಳತನಕೆ ವೆಚ್ಚವು ॥ ಬಿಡಿಸು ವರಾರಿಲ್ಲವೇ । ಶ್ರೀಹರಿ ಶಿವನೇ । ಮೊಡವಿಯೊಳೆನ್ನಸುವೆ ॥ ಧಡಿಗನೀತನ ಕೈಯಲಿ । ನೀಗುವದಾಯ್ತೇ । ಪಡೆದ ಪ್ರಾರಬ್ಧದಲೀ ॥ ೯೫ ॥

## ಕೇದಾರ ಗೌಳ – ಝಂಪೆ

ಇತ್ತ ಕಿಷ್ಕಿಂಧೆಯಲ್ಲಿ । ಓಲಗವ । ನಿತ್ತನುಜನೊಡನೆ ವಾಲಿ ॥ ಇತ್ತಿರಲು ಕೇಳಿದನಾ । ದನಿಯ ತಾ । ಚಿತ್ತದಲಿ ನೊಂದನಾತ ॥ ೯೬ ॥ ದುಷ್ಟನಾರೋ ಪೀಡಿಪ । ನಾರಿಯಳ । ಕಷ್ಟದಾಪತ್ ಪ್ರಲಾಪ । ಶಿಷ್ಟರನು ಪರಿಪಾಲಿಪ । ರೆಂದೆನಿಸಿ । ಇಷ್ಟೇಕೆ ಭಯವು ಭೂಪ ॥ ೯೭ ॥ ಗುಡುಗುಡಿಸುತೆದ್ದ ಭರದಿ । ಸಹಜನನು । ಸಡಗರದಿ ಕರೆದು ಕರದಿ । ಖಡುಗವನು ಕೊಂಡು ಮುದದಿ । ಝಳಪಿಸುತ । ಧಡಿಗನನು ಕೊಲ್ವೆ ಜವದಿ ॥ ೯೮ ॥ ಎಂದೆನುತ ಕ್ರೋಧ ತಾಳ್ದು । ಅನುಜನೊಡ । ನೆಂದ ಬರುವನಕ ಇರ್ದು ॥ ಸಂದೇಹಬೇಡ ಮನದಿ । ಭ್ರಷ್ಟರಿಗೆ । ಇಂದಳುಕುವವನೆ ಜಗದಿ ॥ ೯೯ ॥

## ಘಂಟಾರವ – ಮಟ್ಟೆ ಯಾ ನೀಲಾಂಬರಿ – ಝಂಪೆ

ವೀರ ನಿನ್ನ ವಿ । ಚಾರ ತಿಳಿದೆನು । ಭೋರನೈದುವ । ಕಾರ್ಯವಿಷ್ಟೆಯೇ ॥ ಶೂರ ನಿನ್ನಯ । ಒತ್ತಿನನುಜನು । ಘೋರ ತಪನ ಕು । ಮಾರನಾಗಿಹೆ ॥ ತ್ವರಿತದಿಂದಲಿ । ದುರುಳರೆಲ್ಲರ । ಹರಣ ಕೊಳ್ಳುವೆ । ಕರುಣೆ ಸಪ್ಪಣೆ ॥ ತರಣಿನಂದನಾ । ಆಗದೋರ್ವನಾ । ಕರದಿಯಿೀರ್ವರೂ । ಪೋಗಿ ತಡೆವುದು ॥ ೧೦೦ ॥

## ಮಟ್ಟುಗೌಳ – ಅಷ್ಟತಾಳ

ಜವದೊಳೋಲಗವ ಬೀಳ್ಕೊಟ್ಟರು । ಮತ್ತೆ । ಅವರು ಶೀಘ್ರದಿ ಪೊರ ಮಟ್ಟರು ॥ ಅವನೀಶ ವ್ಯೋಮನ ನೋಡಲು ॥ ಕಂಡು । ಮಯ ಕುಮಾರಕನ ಬೆಂಬತ್ತಲು ॥ ೧೦೧ ॥

ಕಳ್ಳ ರಕ್ಕಸನೇ ಆ ನಾರಿಯ । ಕೊಂಡು । ಎಲ್ಲಿಗೊಯ್ಯೆಯೋ ಏನು ಕಾರಿಯ । ಮಲ್ಲ ಸಾಹಸಿ ನೀನು ಆಗಲ್ಕೆ । ಅಲ್ಲೆ ನಿಲ್ಲು । ನಿಲ್ಲೆನುತಾಗ ಕೂಗಲ್ಕೆ ॥ ೧೦೨ ॥ ನಡುಗಿ ದಾನವ ತಾನು ಕನ್ಯೆಯ । ಬಿಟ್ಟು । ಬಡನೆ ಓಡುತ ಹೊಕ್ಕ ನದ್ರಿಯ ॥ ಕುಡಿಲು ಭಕ್ಷಕರೊಡೆಯನೈತಂದು । ಸಂತೈಸೆ । ಹುಡುಗಿಯೆಂದಳುತೋಷ ತಾ ತಾಳ್ದು ॥ ೧೦೩ ॥

## ಸಾಂಗತ್ಯ – ರೂಪಕ

ಬಡವರಾದವರಿಂಗೆ । ಕಡವರ ದೊರೆಯುವ । ಕಡುಹಿತವಾಯ್ತೀಗ ನೊಂದು ॥ ಜಡಜ ಬಾಂಧವ ರಶ್ಮಿ । ಬಡಿದು ಬಾಯಾರ್ದಗೆ । ಪೊಡವಿಯೋಳ್ ತಿಳಿ ಜಲವಿಂದು ॥ ದೊರೆಯುವ ತೆರದಲ್ಲಿ । ಇರುವರು ಬಂದೆನ್ನ । ದುರುಳನ ಸೆರೆಯಿಂದ ಬಿಡಿಸೇ ॥ ಪೊರೆದಿಹಿರಿ ನೀವಿಂದು । ಪರಮ ಆ ಪತ್ತಿನ । ತರಳೆಯ ಕೊನೆಯೋಳ್ ಮಿತ್ರರೆನಿಸಿ ॥ ಅದರಿಂದ ನಿಮಗಿಂದು । ಪುಣ್ಯ ಸಂಗ್ರಹವಾಯ್ತು । ಕದನ ಚಾಪಟರು ನೀವಹುದು ॥ ಮದದ ದೈತ್ಯನ ಹರಣ । ಪೊರೆಸಲನುವಿದೆ ಜೈಸಿ । ಮುದದೊಳಪ್ಪಣೆ ನೀಡಿರಿಂದು ॥ ೧೦೪ ॥

## ಭಾಮಿನಿ

ಎಂದು ದೈನ್ಯದಿ ಕರವ ಜೋಡಿಸಿ । ನಿಂದಿರುವ ಗಂಧರ್ವ ಕುವರಿಯ । ಚಂದದಿಂದಲಿ ಪೋಗಲಾಜ್ಞೆಯನಿತ್ತು ಶೀಘ್ರದಲಿ ॥
ಅಂದು ಕೋಪದಿ ಸೋದರನ ಕರೆ । ದೆಂದ ದುರುಳನ ಪುಡುಕುತ್ತೈದುವ । ದೆಂದು ಕಂಡರು ಮುಂದೆಸಗೆ ಮಹ । ದೊಂದು ಗುಹೆಯಿರಲು ॥ ೧೦೫ ॥

## ಭೈರವಿ – ಝಂಪೆ

ನೋಡಿ ವಾಲಿಯೊಳೆಂದ । ರೂಢಿಯಿಂದಿದರೊಳಗೆ । ಮಾಡಿಕೊಂಡಿಹ ಮನೆಯ ನಿಜವು ॥ ಗಾಢದಿಂ ಪೊಕ್ಕವನ । ಗೂಢವನು ಹೊರಗೆಳೆದು । ಮಾಡುವೆನು

ಸಂಗರವ ಬಲವು ॥ ೧೦೬ ॥ ಉಡುಗಿ ಹೋಗುವ ತೆರದಿ । ಬಿಡದೆ ಹಳಚುತ ಲವನ । ಕಡಿದು ಶಿರವೊಪ್ಪಿಸುವೆ ಪದದಿ ॥ ಒಡನೆ ಧುರವೀಳ್ಯವನು । ತಡೆಯದಿತ್ತರೆ ಅವನ । ಬಡಿದು ಬಹೆ ನಾನಿಂದು ಮುದದಿ ॥ ೧೦೭ ॥ ಎರಗಿ ನಿಂದಿಹ ತಪನ । ತರಳ ಕೇಳೆಲೋ ಸಮರ । ಬರಿದೆ ಹುಡುಗಾಟವೇನಯ್ಯ ॥ ತೆರಳುವೆನು ನಾನವನ । ಧುರಕೆ ಗುಹೆ ಕಿಂಡಿಯನು । ಬರುವನಕ ಕಾದಿರಲು ಬೇಕಯ್ಯ ॥ ೧೦೮ ॥ ಎಂದು ಸುಗ್ರೀವನನು । ನೇಮಿಸುತ ಕೋಪದಲಿ । ಗಂಧರ್ವ ತರಳೆಯಂತಲ್ಲ ॥ ಮುಂದಿನ್ಯೋಚನೆ ಬೇಕು । ಎಂದು ಗೊಣಗುತ ಹೊಕ್ಕು । ಚಂದದಲಿ ಗುಹೆಯಾಳ್ದ ಮಲ್ಲ ॥ ೧೦೯ ॥

## ಶಂಕರಾಭರಣ – ಮಡ್ಯ

ಕಳ್ಳರಂತೆ ಓಡಿ ಬಂದು ಗುಹೆಯ ಹೊಕ್ಕೆಲಾ । ಎಲ್ಲಿ ಅಡಗಿ ಕುಳಿತೆ ನೀನು ಹೊರಗೆ ಬಾರೆಲಾ ॥ ೧೧೦ ॥

ಗುಡುಗುತೊಡನೆ ಬಂದು ಕೇಳ್ದ ನೀನು ಯಾರೆಲಾ ।
ಪೊಡವಿಯೊಳಗೆ ಜೀವದಾಸೆ ಇಲ್ಲವೇನೆಲಾ ॥ ೧೧೧ ॥
ಯಾರು ಸಾಯ್ವರೆಂಬ ಪರಿಯ । ರಾಕ್ಷಸಾಧಮಾ ॥
ತೋರಿ ಕೊಡುವೆನೀಗ ಕಣದಿ ಶೂರನಾಮಮಾ ॥ ೧೧೨ ॥
ನಾನು ಮಯನ ಸುತನು ಭಾವ ರಾವಣೇಶ್ವರ ।
ಏನು ಧೈರ್ಯದಿಂದ ಕರೆದೆಕೀಶಧೀಶ್ವರಾ ॥ ೧೧೩ ॥
ದಿಟ್ಟ ಲಂಕಾಪತಿಯ ಹಿಂದೆ ಎನ್ನ ತರಳನಾ ॥
ತೊಟ್ಟಿಲಂಗೆ ಯೆಳೆದು ತಂದು ಕಟ್ಟಿ ಮೆರೆದೆನಾ ॥ ೧೧೪ ॥
ಮಾಯ ವಿದ್ಯೆಯೊಳಗೆ ನಮ್ಮ ಕುಲಕೆ ಸರಿಯಹ ।
ಯಾವ ಧೀರನಿಹನು ಜಗದಿ ಬರಲಿಕಾಗ್ರಹ ॥ ೧೧೫ ॥
ಹಿಂದೆ ಶರಧಿ ಮಥನದಲ್ಲಿ ತೋರ್ದ ಸಾಹಸಾ ॥
ಮಂದ ಮತಿಯೆ ಬಲ್ಲೆಯೇನೋ ಎನ್ನ ಪೌರುಷಾ ॥ ೧೧೬ ॥
ಬರಿದೆ ಗರ್ವ ಬೇಡ ಮಾಯದಿಂದ ನಿನ್ನಯ ॥
ಹರಣ ಕೊಳುವೆ ರಣದಿ ಕೇಳೋ ಇದುವೆ ನಿಶ್ಚಯ ॥ ೧೧೭ ॥
ಹೆಣ್ಣು ಕಳುವ ಹೇಡಿ ನೀನು ಬವರ ಕೊಡುವೆಯಾ ।

ಹಣ್ಣು ಮಾಳ್ಪೆ ನಿಲ್ಲೊ ರಣಕೆ ತೋರು ಮಾಯವಾ ॥ ೧೧೮ ॥
ಗುದ್ದುತೊಬ್ಬರೊಬ್ಬರಡಿಗೆ ಬಿದ್ದು ಗುಹೆಯಲಿ ॥
ಎದ್ದು ಮಲ್ಲರಂತೆ ಹೊಡೆದುಕೊಂಡರಿಳೆಯಲಿ ॥ ೧೧೯ ॥
ಕಪಿಯು ವಜ್ರಮುಷ್ಠಿಯಿಂದ ತಿವಿಯೆ ಮಯಸುತ ॥
ಶಪಿಸಿ ತನ್ನ ಜೀವ ಕಳೆದ ರಕ್ತ ಕಾರುತ ॥ ೧೨೦ ॥

## ಕಂದ

ಇತ್ತಲಾ ಸುಗ್ರೀವನು ಬೇ । ಸತ್ತು ಗತಿಸಿದ ಕಾಲವ ತಿಳಿಯುತ್ತಾಕ್ಷಣ ದಿಂ ॥ ಮತ್ತೆ ರುಧಿರದ ಜಲವ ಕಾ । ಣುತ್ತಲ್ ಭಯದಿಂದಗ್ರಜ ಮೃತಿಯೈದಿದಯೆನುತಂ ॥ ೧೨೧ ॥

## ನೀಲಾಂಬರಿ – ಮಟ್ಟೆ

ಇಂತು ಅಗ್ರಭವನು ಇಂದು । ಕಂತುಹರನ ಲೋಕಕ್ಕೈದ । ನೆಂತು ಸಹಿಸಲಿದನು ಯೆನುತ । ಚಿಂತಿಸುತ್ತಲಿ ॥ ಅಂತರಂಗ ಕರಗಿ ನೆರೆತ । ನ್ನಂತೆ ತಾನೇ ಭುವಿಗೆ ಬಿದ್ದ । ಅಂತರಹಿತ ರಕ್ಷಿಸೆನುತ ಮೂರ್ಛೆಯಿಂದಲಿ ॥ ೧೨೨ ॥

## ರೂಪಕ

ಸುರಕುಜ ಧರೆಯೊಳಗುರುಳತೇ । ಹಿರಿಯನು ಪೋದನೇ ಅಗಲುತ ॥ ಹರಹರ ರಾಕ್ಷಸನಲಿ ತಾ । ಧುರ ಮಾರಿಯದಾಯ್ತೇ ॥ ಧರೆಯೊಳು ಬಾಳ್ವೆಯ ಹಿರಿ ಸೋ । ದರನಿರದೆಲೆ ಮಾಳ್ಪುದು ಹೇ । ಗಿರಲಕಟಾ ಕಿಷ್ಕಿಂಧೆಯು । ಬರಿದಾಯಿತೆಯಿನ್ನು ॥ ೧೨೩ ॥

## ಕೇದಾರಗೌಳ – ಅಷ್ಟತಾಳ

ನಯನದಿ ಧಾರಾಶ್ರು ನೆಲಕುದುರುವದೇಹ । ಭಯದಿಂದ ತಾ ನಡುಗುತಿರಲು ॥ ಅವಸರದೊಳು ತಾರಾ ದೇವಿ ತಾನೈತಂದು । ಸುವಿವೇಕದಿಂದಾದ ಕಥೆಯ ॥ ೧೨೪ ॥

## ಭಾಮಿನಿ

ಕೇಳುತಲಿ ಸಂಗತಿಯ ತಾರೆಯು । ಬಾಳೆ ಬಿಸಿಲಿಗೆ ಬಳಲಿ ಭುವಿಯೊಳು ।

ಬೀಳುವಂದದೊಳೊರಗಿ ಮೂರ್ಛಿಸಿ ಚೇತರಿಸುತಲಿ ॥ ಹೂಳಿ ಹೋದುದೇ ಯೋಗ ಶಿವಶಿವ । ಬಾಳುವುದು ಹೇಗಿನ್ನು ಭಾಗ್ಯವೇ । ಬಾಳನೇತ್ರನ ದಯವು ತೀರಿತೇ ನಲ್ಲನಗಲಿದನೇ ॥ ೧೨೫ ॥

ಕೇಳಿ ಜಾಂಬವ ತಾನು ವ್ಯಾಕುಲದೊಳು ನೊಂದು । ಬಾಳ ದುಃಖಿಸುತಿರ್ಪ ರವಿಜ – ತಾರೆಯರ ॥ ಗೋಳನೀಕ್ಷಿಸಲರಿದು । ಪೇಳಿ ಸದ್ಧೈರ್ಯವನು ಅವರಿಗೆ । ಕಾಲ ಮಹಿಮೆಯು ಎಂತುಟೋ ಎಂದನಾವಿಧಿಕುವರಾ ॥ ೧೨೬ ॥

## ಕಲ್ಯಾಣಿ – ಅಷ್ಟತಾಳ

ಜಲಜಲೋಚನೆ ಯಾಕೆ ದುಃಖಿಪೆ । ನೆಲೆಯಿರದು ಸಂಸಾರವೆಂಬುದು । ಜಲದ ಮೇಲಿನಗುಳ್ಳೆಯಂದದಿ । ತಿಳಿಯಲಾರೆಯ ಕೇಳು ಸುಗ್ರೀವ ॥ ೧೨೭ ॥ ಪಂಚ ಭೂತಾತ್ಮಕದ ದೇಹವು । ಪಂಚದಿಂದ್ರಿಯ ಚಪಲ ಚಿತ್ತಕೆ । ಸಂಚು ಹೂಡುತ ನಶ್ವರಕೆ ದಿನ । ಮುಂಚೆ ಕರೆವುದು ಎಂಬುದರಿಯೆಯ ॥ ೧೨೮ ॥ ಚಿತ್ತದಲಿ ವ್ಯಥೆಗಳನು ತಾಳದೇ । ಮತ್ತೆ ಕ್ರಮಗಳನರಿತು ವಾಲಿಯ । ಉತ್ತರ ಕ್ರಿಯೆಗಳನು ಎಸಗುತ । ಸತ್ವದಿಂದರಸಾಗಿ ಆಳ್ವುದು ॥ ೧೨೯ ॥

## ವಾರ್ಧಿಕ

ಆಲಿಸುತ ಜಾಂಬವರು ಪೇಳಿರುವ ಮಾತುಗಳ । ಶೀಲ ಗುಣವತಿ ತಾರೆ ಕಾಲ ಕರ್ಮದಗತಿಯು । ಗೋಳ ಕೊಟ್ಟಿತು ಎನುತ ಮಮ್ಮಲದಿ ಮರುಗುತ್ತ । ಬೀಳುತೇಳುತ್ತೈದಿದಳು ॥

## ಸೌರಾಷ್ಟ್ರ – ತ್ರಿವುಡೆ

ಓಡಿ ಬಂದೆಯಾ ಮಾನಗೇಡಿಯೆ ।
ಕೂಡಿಕೊಂಡಳೇ ರಾಜ್ಯ ಲಕ್ಷ್ಮಿಯು ।
ರೂಢಿ ಹೊರುವುದೆ ಪಾಪಿ ಅಂಜದೆ ।
ಹೇಡಿ ನಿನ್ನ ॥ ೧೩೫ ॥
ಬಡಿದು ರಾಷ್ಟ್ರದ್ರೋಹ ಶಿಕ್ಷೆಗೆ ।
ಗಡಿಯ ಆಚೆಗೆ ನೂಕಿ ಸತಿಯನು ।

ಕೊಡದೆ ನಾನಾಳುವೆನು ರಾಜ್ಯವ ।
ಸಡಗರದೊಳು ॥ ೧೩೬ ॥

## ಭಾಮಿನಿ

ಮೃಡ ಸಮೋಪಮನಗ್ರಜನ ಪದ ।
ವಿಡಿದು ಹಮ್ಮೈಸುತ್ತ ಶಿಕ್ಷೆಯ ।
ಪಡೆದು ಪೋಗುವೆ ಕ್ಷಮಿಸುತೆನ್ನನು ।
ಕೊಡು ನೀನು ರುಮೆಯ ॥ ೧೩೭ ॥
ಬಿಡದೆ ನೀನನುಭವಿಸು ವಿರಹವ ।
ಸುಡಲಿ ತವ ವಿಕ್ರಮವು ಹೇಡಿಯೆ ।
ಕೊಡೆನು ನಿನ್ನಯ ಸತಿಯ ಎನೆಸಭೆ ।
ಯಡೆಗೆ ಪೊರವಂಟ ॥ ೧೩೮ ॥

# ಸಮಗ್ರ ದೂರ್ವಾಸ

- ಕೃತಿಕರ್ತರು -

ಜಿ. ಎಂ. ಭಟ್ಟ ಕೆ. ವಿ.

–ಶ್ರೀ–

# ಸಮಗ್ರ ದೂರ್ವಾಸ

**ಪಾತ್ರ ವರ್ಗ**

೧ – ದೂರ್ವಾಸ

೨ – ವಿದ್ಯಾಧರಿ

೩ – ಇಂದ್ರ – ಶಚಿ

೪ – ಕುಂತಿ

೫ – ದುರ್ಯೋಧನ

೬ – ಪಾಂಡವರು

೭ – ಅಂಬರೀಷ

೮ – ದುರ್ದೇವತೆ

೯ – ಕೃಷ್ಣ – ರುಕ್ಮಿಣಿ

೧೦ – ರಾಮ

೧೧ – ಲಕ್ಷ್ಮಣ

೧೨ – ಮುದ್ಗಲ

**ನಾಟಿ – ಝಂಪೆ**

ಜಯತು ಶ್ರೀ ಗಣನಾಥ । ಜಯತು ಗೌರೀಪ್ರೀತ ॥
ಜಯತು ವಿಘ್ನಧ್ವಾಂತ । ಜಯ ಶಂಭು ಜಾತ ॥
ಜಯತು ಅಕ್ಷರದಾತ । ಜಯತು ಗಜ ಸಂಕೇತ ॥
ಜಯತು ದುರಿತ ವ್ರಾತ । ಹರನೆ ಪೊರೆ ಸತತ ॥ ೧ ॥

ಶಂಕರಗೆ – ಶಾಂಭವಿಗೆ । ಶಂಖಧರನಿಗೆ ಸಿರಿಗೆ ॥
ಸರಸಿರುಹ ಭವಗೆ ವರೆ । ದಂಕೆ – ಅಕ್ಷರಿಗೆ ॥
ಅಂಕಿತವನರಿವ ಬಿರು । ದಾಂಕಿತದ ಜನಕೆ ರಜನಾಂಕುರವ ನೀಯೆಪದ ।
ಪಂಕಜಕೆ ಮಣಿವೆ ॥ ೨ ॥

## ಭಾಮಿನಿ –

ಸಪ್ತ ಋಷಿ ಮಂಡಲದೊಳತ್ರಿಯು । ಸಪ್ತಕದಿದ್ವಯನವನು ಕಾಷ್ಠದಿ । ಸಪ್ತ ಜಿಹ್ವನ ತೆರದೊಳಿರ್ದನು । ಮಂತ್ರ ತೇಜದಲಿ ॥ ಸಪ್ತಸಪ್ತಿಯ ಬೆಳಕ ನೀಡುತ । ಸಪ್ತದ್ವೀಪ ಜಗದನುಭವದೊಳವ । ಸಪ್ತ ತಂತು ಪುರೋಹಿತನೆನಿಸ । ಲಿಂತು ನಾಕದಲಿ ॥ ೩ ॥

ಅತ್ರಿ ಮುನಿ ಪುಂಗವಗೆ ಚಂದ್ರ ದ । ತ್ತಾತ್ರೇಯ ನರ್ಯಮನು ದುರ್ವಾಸ । ಪುತ್ರ ರೆಂದೆನಿಸಿದರನುಸೂಯೆ । ದೇವಿಗರ್ಭದಲಿ ॥ ಮತ್ತೆ ರುದ್ರಾಂಶದೊಳು ಜನಿಸಿಹ । ಮೃತ್ಯು ಮುಖ ದೂರ್ವಾಸ ಬೆಳೆದಿಹ । ನತ್ತ ಸತ್ವಾಧಿಕನು ಶಾಪದಿ । ಬ್ರಹ್ಮ ತೇಜದಲಿ ॥ ೪ ॥

## ಸೌರಾಷ್ಟ್ರ – ತ್ರಿವುಡೆ

ಪರಮ ಸುಂದರಿಯೆನಿಪ ವಿದ್ಯಾ । ಧರಿಯು ಸ್ವರ್ಗದ ತರುಣಿಯೊಂದಿನ । ಕುರುಳ ಸಿರಿಮುಡಿಗಂದು ಪುಷ್ಪದ । ಸರವ ಸೂಸುತ ಹರುಷದಿಂದಲಿ । ಬರುವ ಸಮಯ ॥ ೫ ॥

ಕರದಿ ಹೇಮದ ಕಂಕಣವ ನಿರಿ । ಸಿರುತ ಪೀತಾಂಬರವ ನಂದದ । ನಿರಿಯುಡುಗೆ ಕಂಚುಕವ ಧರಿಸುತ । ವರ ಮನೋಹರೆ ಚಂದ್ರ ಚೆಲುವಿನ । ಸುರಸುಧತಿಯು ॥ ೬ ॥

ಕಿರುನಗೆಯ ಸರಸದಲಿ ಮಾನಿನಿ । ಬರೆದ ಭ್ರೂಲತೆ ನಡುವೆ ಕಸ್ತುರಿ । ಮಿರುಗು ತಿಲಕವನಿರಿಸಿ ಸರ್ವಾಭರಣವಿಡುತಲಿ ಕಲ್ಪದ । ತರುವರಳನು ॥ ೭ ॥

ಕರದಿ ಪಿಡಿಯುತ ಮನುಜ ಧರಣಿಗೆ । ಬರುವ ಸಡಗರ ಸೋಜಿಗವ ನುರೆ । ಹಿರಿದು ವರ್ಣಿಸೆ ಪದಗಳಿಲ್ಲವು । ಮೆರಗದದ್ಭುತ ಮಿನುಗು ತೇಜದಿ । ಬರಲು ಭರದಿ ॥ ೮ ॥

## ಝಂಪೆ

ಇಂದ್ರನಮರಾವತಿಗೆ । ಪೋಪ ವಾಂಛಿತದ ಮುನಿ । ಚಂದ್ರ ಸೋದರ ಸುಪ್ರಚಂಡ ॥ ಅಂದು ಹೊರವಂಟಿರಲು ದಾರಿಯಲಿ ಸುರ ತರುಣಿ । ಚಂದದಿಂ ಬರುವುದನು ಕಂಡ ॥ ೯ ॥

## ಕೇದಾರ ಗೌಳ – ಅಷ್ಟ

ಮೋಹಿನಿಯಂದದೊಳು ಚೆಲುವನಾಂತಿಹ ಮನ । ಮೋಹಕ ಸುವಾಸಿತವ ॥ ವಾಹಿಸುವೀ ಪುಷ್ಪ ಮಾಲೆಯ ಧರಿಸುತ । ನೀ ಹೆದರದೆ ಬಂದಿರುವ ॥ ೧೦ ॥ ಪರಿಯ ಶೀಘ್ರದೊಳೆನೆಗೆ ಅರುಹಬೇಕೆನೆ ವಿದ್ಯಾ । ಧರಿಯು ಕಿರುನಗೆ ಸೂಸುತ ॥ ಪರಮ ತೇಜೋಮಯ ಮುನಿವರ್‍ಯ ನೀನಾರು । ಪೊರಟುದೆಲ್ಲಿಗೆ ಪೇಳೆನ್ನುತ ॥ ೧೧ ॥

## ಮಾರವಿ – ಏಕ

ಲೋಕದೊಳತ್ರೀಜಾತನು ನಾ ಸುರ । ಲೋಕಕೆ ಪಯಣಿಸುವ ॥ ಸಾಕದು ಸಡಗರ ನೀ ಕರುಣಿಸು ಸುರಿ । ದಾ ಕುಸುಮದ ಸರವ ॥ ೧೨ ॥

## ಅಷ್ಟ–

ಶಶಿ ಸಹೋದರ ದೂರ್ವಾಸಸನೆ ನಾ ಕೇಳಿರ್‍ವೆ । ಪೆಸರಿಗನ್ವರ್ಥಕವು ॥ ಋಷಿಯೆ ದಿವಾನ್ವಯ ನಾಮ ವಿದ್ಯಾಧರಿ । ಪೊಸ ಕಲ್ಪತರು ಮುಗುಳವು ॥ ೧೩ ॥

## ಮಾರವಿ – ಏಕ

ಕುಪಿತಾಂತಕೆ ನೀ ಕೆಣಕದಿರೆನ್ನನು । ಅಪರಿಚಿತಳು ಎನಗೆ । ಅಪರೂಪದ ಸುಮ ಕೊಡದಿರೆ ಜಲದೊಳು । ಶಪಿಸುವೆ ನೀ ಬಗೆಗೆ ॥ ೧೪ ॥

## ಅಷ್ಟ

ಮುನಿದು ನಿಂತರೆ ನಾರಿ ಮುನಿಶಾಪವಿದಿರೇ ಕೇಳ್ । ಅನುಪಮ ಸುಧಾರಸದಿ ॥ ಜನನ – ಮೃತ್ಯುವ ಗೆಲ್ದ ಕೀರ್ತಿ ಶಾಲಿಗಳೈಸೆ । ಅನಿಮಿಷರ್ ತತಿಬಣದಿ ॥ ೧೫ ॥

## ಮಾರವಿ – ಏಕ

ಕಲ್ಪದವರೆಗೂ ಕಾಣದು ಮರಣದ । ತಲ್ಪವೆಮಗೆ ಕೇಳು ॥ ಕಲ್ಪದ ತರು ಪೂಸರವನು ಕೊಡು ಮಿಗೆ । ಕಲ್ಪನೆಯಿದೆ ತಾಳು ॥ ೧೬ ॥

## ಭಾಮಿನಿ –

ಆರ್ಯಮಾಗ್ರಜ ಕೇಳು ಘನಯತಿ । ವರ್ಯ ನೀಡುವೆ ಸರವನೆನ್ನೊಳು । ಕ್ರೌರ್ಯವನು ತಾಳದಿರು ಸುಮ್ಮನೆ । ವಾದವೇಕಿಂದು ॥ ವೀರ್ಯವಂತನು ನೀನು ಪರಮಾ । ದರ್ಯ ತಪನಿಧಿಯೆನುತ ವಿದ್ಯಾ । ಧರ್ಯೆ ನೀಡಿದಳವಗೆ ಕರುಣದಿ । ಮಾಲೆಯನು ತೆರಳ್ದು ॥ ೧೭ ॥

## ಝಂಪೆ

ತರುಣಿ ತೆರಳಿದ ಬಳಿಕ । ಉರಿಮುಖನು ಮಾಲೆಯನು । ಶಿರಕೆ ಸುತ್ತುತ ಭ್ರಮೆಯನಾಂತ ॥ ಚರಿಸುತಿರೆ ಮರುಳು ಮುನಿ । ಸುರಲೋಕ ದಾರಿಯಲಿ । ಬರುವುದನು ಕಂಡ ಶಚಿಕಾಂತ ॥ ೧೮ ॥

## ಸೌರಾಷ್ಟ್ರ –ತ್ರಿವುಡೆ

ಇತ್ತಲೈರಾವತದೊಳಿಂದ್ರನು । ಮತ್ತೆ ಶಚಿಯೊಡನೈದುತಿರೆ ಮುನಿ । ಮತ್ತನಾಗುತ ಸರವ ಸುರಪತಿ । ಗೆತ್ತಿಯೊಗೆದ ॥ ೧೯ ॥

ಕ್ರುದ್ಧನಾಗದೆ ಸುರಪುರೇಂದ್ರನು । ಮುದ್ದು ನಗೆಯನು ಬೀರಿ ಮಾಲೆಯ । ತಿದ್ದು ತೈರಾವತಕೆ ತೊಡಿಸುತ । ಲಿರ್ದ ಸುರಪ ॥ ೨೦ ॥

## ದ್ವಿಪದಿ –

ಕುಂಭ ಸ್ಥಳದೊಳು ಬಿದ್ದ । ಪುಷ್ಪ ಪರಿಮಳಕೆ ॥ ಗಂಭೀರ ಮದವದನ । ವಾಂತದರ ಭುವಿಗೆ ॥ ೨೧ ॥

ಎಸೆದ ಕೃತಿಯನು ಕಂಡು । ಮುನಿಪ ತಾ ಖತಿಯ ॥ ಮಸಗಿದನು ಆ ಕ್ಷಣದಿ । ನೋಡಿ ಶಚಿಪತಿಯ ॥ ೨೨ ॥

## ಅಷ್ಟ

ಅಂತರಿಕ್ಷದೊಳಿಂತು । ನಿಂತಹಂ ಕೃತಿ ಗೈದೆ । ಕಂತುವನು ಹರ ದಹಿಸಿದಂದದೊ । ಳಂತು ಉರುಹುವೆ ನಿನ್ನನು ॥ ೨೩ ॥

## ಭಾಮಿನಿ

ಭೀಕರದ ಮುನಿ ವಚನ ಗುಡುಗಿಗೆ । ಲೋಕ ಸರ್ವವೂ ನಡುಗಿ ಸುರಜಗ । ದಾಕವಾಟವು ತೆರೆದು ವರ್ಷಾ । ಕಾಲ ಶರದಂತೆ ॥ ನಾಕಪತಿ ಶಚಿ ಸಹಿತಲಿಳಿದು ವಿ । ವೇಕವನು ದೂರ್ವಾಸಗರುಹಲು । ಆ ಕೋಪಾಟೋಪ ಮುನಿಯಿಳಿಯೆ ಪದ । ಕೋಕನದಕೆರಗಿ ॥ ೨೪ ॥

## ಮಟ್ಟೆ

ಮನ್ನಿಸೆನ್ನ ರೌದ್ರವೇಕೆ । ಗಣ್ಯ ಮುನಿವರ ॥ ಸನ್ನುತಾಂಗ ಆನೆಯೆಸೆಯೆ । ಪುಣ್ಯಾವಾಸರ ॥ ೨೫ ॥
ಮೂಕಪ್ರಾಣಿಗೇನು ತಿಳಿವು । ಹೇಕುಮಾರನೆ ॥ ಸಾಕು ಕ್ರೋಧ ಗರ್ವವಲ್ಲ । ನಾಕುಚೇಷ್ಟನೇ ॥ ೨೬ ॥

## ಮಾರವಿ ಏಕ

ಏ ಶತಯಾಗನೆ ಮಾಡದಿರೆನಗುಪ । ದೇಶವ ಬಲ್ಲೆನೆಲ ॥ ದೋಷಿಯು ನೀ ವ್ಯಭಿ ಚಾರಿಯಹಲ್ಯೆಯ । ನಾಶಕೆ ನೀನೆ ಭಲ ॥ ೨೭ ॥

## ಮಟ್ಟೆ

ಗೌತಮಾಖ್ಯ ನಂದು ಮೋಸ । ಮಾತಿಗವನಡಿ ॥ ಆ ತುರೀಯ ಸಮಯ ಗೈದೆ । ಏತಕಾನುಡಿ ॥ ೨೮ ॥

## ಮಾರವಿ ಏಕ

ಧಾತ್ರಿ ಚತುರ್ದಶ ಆಳ್ವಾಸೆಯು ಮದ । ಗೋತ್ರ ವೈರಿಯೆನುವ ॥ ನೀ ತ್ರಿಂಶತ್ ಪತಿ ಕೆಡಿಸಿದೆ ಪ್ರಲ್ಹಾದ । ಪೌತ್ರನ ಅಧ್ವರವ ॥ ೨೯ ॥

## ಭಾಮಿನಿ

ವನಜ ಪೀಠನ ಹಗಲಿನವಧಿಗೆ । ಮುನಿಯೆ ಕೇಳೀರೇಳು ಇಂದ್ರರು । ಮನುವದಂತರ ಕೋರ್ವನಾಳ್ವನು । ಅಷ್ಟರವಧಿಯಲೇ ॥
ಮನುಜ ಧರೆಯೊಳಗಿರುವ ದೈತ್ಯರು । ಅನಿಮಿಷರ ಒಡೆತನವು ಬೇಕೆನೆ । ಘನ ಕೃತುವ ಶತವೆಸಗೆ ಕೊಡಲದು । ಸಮವೆಪದವಿಯಲಿ ॥ ೩೦ ॥
ಇಂದ್ರಿಯಗಳದಿ ದೇವ ನೀನಿಹೆ । ಇಂದ್ರಿಯದ ಚಪಲತ್ವದಿಂದ ನಿ । ರಿಂದ್ರಿಯನು ನೀನಾದೆ ಶಾಪವನಿತ್ತ ಗೌತಮನು ॥ ಇಂದ್ರಲೋಕದ ಗದ್ದುಗೆಯ ಮಿಗೆ । ಇಂದ್ರ ಪದವಿಯ ಮೋಹಗೊಂಡ ಮ । ಹೇಂದ್ರ ನಿನ್ನಯ ಗರ್ವವಿಳಿಸುವೆ । ಪಿಡಿಯೋ ಶಾಪವನು ॥ ೩೧ ॥

## ಸೌರಾಷ್ಟ್ರ – ತ್ರಿವುಡೆ

ಅಜನು ಹರಿಯಮ ಬಂದರೆಯು ಮಿಗೆ । ಅಜಿನಧರನಾಗಮಿಸಿ ತಡೆದುರೆ । ದ್ವಿಜನ ಶಾಪಕೆ ಪ್ರತಿ ವಿರೋಧವ । ಸೃಜಿಸುವವರೇ ॥ ೩೨ ॥
ಸ್ಥಾನ ಚ್ಯುತಿಯಾಗೆನುತ ಮತ್ತಾ । ದಾನವರ ದೆಸೆಯಿಂದ ಶೀಘ್ರದಿ । ಹಾನಿಯಾಗಲಿ ಮೂರು ಲೋಕದ । ಮಾನವಿತ್ತ ॥ ೩೩ ॥

## ಝಂಪೆ

ನಡುನಡುಗಿ ಶಚಿದೇವಿ ಮುನಿಯ ಶಾಪಕೆ ಬೆದರಿ । ಪಿಡಿದವನ ಚರಣ ವಾರಿಜವ ॥ ಸಿಡಿಯದಿರು ಮಮಪತಿಯ ಪರವಾಗಿ ಬೇಡುವೆನು । ಮೃಡಸಮನೆ ಕ್ಷಮಿಸೊ ಆ ಕೃತವ ॥ ೩೪ ॥
ಗಣಿಸದಲೆ ಧಾವಿಸಿದ ಮುನಿಪತಿಯ ಕರೆಕರೆದು । ಅನಿಮಿಷನು – ಇಂದ್ರಾಣಿ ಸಹಿತೆ ॥ ದಣಿದರ್ಐರಾವತವು ಸುರಿಸಿತದು ನಯನಾಂಬು । ಕಣಗಳನು ಭುವಿಗೆ ಘೀಳಿಡುತ ॥ ೩೫ ॥

## ಅಷ್ಟ

ಇಂದ್ರಂಗೆ ಛಲ ಪೇಳಿ ಬಂದು ಯೋಚನೆ ಗೈದ । ಕಂದಳಿಯರಸ ದೂರ್ವಾಸ ॥ ಇಂದು ಸಾಕೇತದೊಳೇಕಾದಶೀ ವ್ರತ । ದಿಂದ ಗರ್ವಿತನಂಬರೀಷ ॥ ೩೬ ॥

**ಸುರಟಿ – ಏಕ**

ಶೀಘ್ರದಿ ಪೋಗುವೆನು । ಭೂಪನೇ । ಕಾಗ್ರತೆ ಪರಿಕಿಪೆನು ॥ ಆಗ್ರಹಗೈವೆನು ಪಾಯದೊಳೆನೆ ಮುನಿ । ಉಗ್ರತೆಯಿಂದಲಿ ತೆರಳಲಿಕಿತ್ತಲು ॥ ೩೭ ॥

**ವಚನ**

ಇತ್ತಲಂಬರೀಷನು ಒಡ್ಡೋಲಗಂಗೋತ್ಯರಲದೆಂತೆನೆ ॥

**ಕಾಂಬೋಧಿ – ಝಂಪೆ**

ಮಾಂಧಾತ ಸಂಜಾತ ಅಂಬರೀಷನು ತನ್ನ । ಬಾಂದಳದ ಮಣಿ ಕುಲಾಸ ನದ ॥ ಸೌಂದರ್ಯಭರಿತನವ ರಾರಾಜಿಸಿದನರಾ । ಕೇಂದುಮುಖನಂದು ವೈಭವದಿ ॥ ೩೮ ॥

**ಏಕತಾಳ**

ಮಣಿಹಾರರು ಪುರ । ಜನರೆಲ್ಲರು ವರ । ದಣಿಗೆ ಪರಾಕೆಯನು ॥ ಗುಣಗಾನದ ನುಡಿ । ಪೊರೆಯುತ ನೃಪನಡಿ । ಮಣಿದಿರೆ ಚಾರಕನು ॥ ೩೯ ॥

**ಏಕ**

ಸ್ವಾಮೀ ಚಿತ್ತವಿಸಬೇಕಿದನು । ಪುರದ್ವಾರದಿ । ನೇಮದೊಳಿರ್ಪ ನಾ ಚರನು ॥ ತಾಮಹೋಗ್ರದೋಳೋರ್ವ । ತಾಮಸ ಮುಖಿ ಪಾರ್ವ । ಈ ಮಹಿಯೊಳಗಾಚರಿಸುವ ವ್ರತದಲಿ । ಧಾರ್ಮಿಕನಾಗಲು ಧಾವಿಸಿ ಬಂದನು ॥ ೪೦ ॥

**ಭಾಮಿನಿ**

ಚರರ ನುಡಿಯನು ಕೇಳಿ ಕ್ಷಿತಿಪನು । ಹರುಷಗೊಳ್ಳುತಲಾಗ ಪರಿಜನ । ವೆರೆಸಿ ವಿಪ್ಪರವಿಳಿದು ಫಲಗಳ । ಕರದೊಳಿರಿಸುತಲಿ ॥ ಭರದೊಳೈತಂದಿದಿರುಗೊಳುತಲಿ । ವರತಪೋಧನಯೆನ್ನ ವ್ರತಕಿದು । ಪರಮ ಸಾರ್ಥಕವಾಯ್ತು ಮಣಿವೆನು । ಚರಣಕಮಲದಲಿ ॥ ೪೧ ॥

ಸದನ ಪಾವನವಾಯ್ತು ತಮ್ಮಯ । ಪದರಜರೊಳನುಗ್ರಹಿಸಿರೆನ್ನನು ।

ಮುದದೊಳುಚಿತಾಸನವ ನಾಲಂ । ಕರಿಸುವುದು ಎನುತ ॥ ಪದದಿ ಪಾದ್ಯವ ಸಲಿಸಿ ತೀರ್ಥದ । ಉದಕಮಂ ಸ್ವೀಕರಿಸಿ ಷೋಡಶ । ವಿಧಿ ವಿಧಾನ ದೊಳರಸನುಪಚರಿ । ಸಿದನು ಹರಿ ಭಕುತ ॥ ೪೨ ॥

**ಅಷ್ಟತಾಳ**

ಕುಳಿತುಕೊಳ್ಳೈ ಹರಿಯ ವ್ರತನಿಷ್ಠ । ಸುಗುಣಾಂಬರೀಷ । ವಲಿದು ಭಕ್ತಿಗೆ ಪೇಳ್ವೆ ಮನದಿಷ್ಟ ॥ ನಲಿವು ನೋವುಗಳುಳ್ಳ ಜೀವನ । ದೊಳಗು ನೀನಾಚರಿಪ ಸುಲಭದ । ನಳಿನ ನೇತ್ರನ ವ್ರತದೊಳತಿಥಿಯ । ಸ್ಥಳವ ಕೈಗೊಳಲೆಂಬೆ ನಿರ್ದಿಷ್ಟ ॥ ೪೩ ॥

ಮುನಿಯೆ ಕೇಳೀ ದಿನದಿ ದ್ವಾದಶಿಯ । ಶುಭದೊಳಗೆ ಬಂದಿರಿ । ಮುನಿಗಳೆಲ್ಲರು ಇಹರು ಪಾರಣೆಯ ॥ ಮಣೆಗೆ ನೀವಿರಲೆನ್ನ ಯೋಗ್ಯತೆ । ಗಿನಿತು ಕಳೆಯದು ಬರಲು ತಮ್ಮಯ । ಅನುಗ್ರಹವು ದೊರಕಿದರೆ ಧನ್ಯನು । ಸನಿಹ ನದಿಯಲಿ ಮಿಂದು ಸಂಧ್ಯೆಯ ॥ ೪೪ ॥

ಮುಗಿಸಿ ಬರುವುದು ನೀವು ಪಾರಣೆಗೆ । ಭೋಜನಾಲಯ । ಪುಗುವುದೆನ್ನಲು ಹೊಳೆಯಿತಾ ಋಷಿಗೆ ॥ ಬಗೆದು ಯೋಚನೆಗಳನು ತೆರಳಿದ । ವಿಗಡ ಮುನಿ ನದಿಗಿತ್ತಲರಸನು । ಭಕುತಿ ಭಾವದಿ ಹರಿಯನರ್ಚಿಸೆ । ಸೊಗಸಿನಿಂದಲಿ ಕುಳಿತು ದೀಕ್ಷೆಗೆ ॥ ೪೫ ॥

**ಭಾಮಿನಿ**

ಶ್ರೀಲೋಲನಾ ವ್ರತವ ಪಿಡಿದ ನೃ । ಪಾಲನತ್ರೀ ಸುತನು ಬರದಿರೆ । ಕಾಲ ಮೀರುವುದೆಂದು ತಿಳಿದ ಸ । ಕಾಲದೊಳು ವ್ರತವ ॥ ಪಾಲಿಸುವುದದು ಧರ್ಮ ಕ್ರಮಕನು । ಕೂಲವಾಗದುಯೆಂದು ಲಕ್ಷ್ಮೀ । ಲೋಲನನು ಸ್ಮರಿಸುತ್ತಲಿತ್ತನು । ನಿರ್ಮ ಲೋಕದವ ॥ ೪೬ ॥

**ಸೌರಾಷ್ಟ್ರ – ತ್ರಿವುಡೆ**

ಪೂರ್ವ ಯೋಚನೆಯಿರುವ ಶಿಖಿ ಮುಖಿ । ದೂರ್ವಾಸನಾಕ್ಷಣದೊಳೈತರೆ । ಪಾರ್ವ ಪುಂಗವರೆಲ್ಲಯೆನ್ನನು । ಓರ್ವನುಳಿದು ॥ ೪೭ ॥

ಪಾರಣೆಯ ಕೈಗೊಂಡಿರೇನಿದು । ಧಾರಿಣೀ ಸುರರಿಂಗೆ ಧರ್ಮವೇ । ಮೀರಗೊಡೆ ಶಾಸ್ತ್ರವನು ತಾನೆಂ । ದಾರುಭಟಿಸಿ ॥ ೪೮ ॥

ಕರೆದು ಧಾತ್ರೀಪಾಲನನು ತವ । ಹರಣವನು ಹೀರುವೊಡೆ ನೀಚನೆ । ಬರಿಸುವೆನು ಕಂಕಾಲ ಮೃತ್ಯುವ । ಧರಿಸು ನೀನು ॥ ೪೯ ॥

## ಅಷ್ಟ

ಎನುತಕಮಂಡಲ ಜಲವನ್ನು । ಭೂಮಿಗೆ ಚೆಲ್ಲಿ । ಮುನಿಯುಗುಳಿದನಗ್ನಿ ಕಣಗಳನು ॥ ಮುನಿವರ ದಂಡವ ನಲುಗಿಸಲಾಕ್ಷಣ । ಘನತರ ಹೊಗೆಯಾಯಿತಿಳೆಯಾಂತು ಕಂಪನ ॥ ೫೦ ॥

## ಮಾರವಿ – ಏಕ

ದುರ್ದೇವತೆಯನು ಸೃಜಿಸಿದನರಸನ । ಮರ್ದಿಸೆ ಖಲೆಯಾಂತು ॥ ಏರ್ದನಿಯೊಳು ತಾ ಮಾರ್ದನಿ ಮೊಳಗಿಸಿ । ಸಾರ್ದನು ಭುವಿಗಿಂತು ॥ ೫೧ ॥

## ಭಾಮಿನಿ

ಕಳವಳಿಸಿ ಮಹಿ ಮಾತ್ಮರೋಡಲು । ಇಳೆಯಧಿಪ ಧೈರ್ಯದೊಳು ನಿಲ್ಲುತ । ನಳಿನ ದಳಾಯತಾಕ್ಷನು ಮುನಿದ । ನಿನಿತೇಕೆ ವಿಘ್ನ ॥ ಬಲವೇ ಕ್ರೋಧವನಾಂತ ಯತಿಗಳ । ಛಲವೇ ಹರಿಯನುಗ್ರಹದ ಮುಂಗಡೆ । ಕಲಿಸುವೆನು ಇವನೇಕೆ ಬಂದನು । ಯಲಾ ಕೃತಘ್ನ ॥ ೫೨ ॥

## ಮಟ್ಟೆ

ನಿಲ್ಲು ನಿಲ್ಲು ತೋರು ನಿನ್ನ । ಮಲ್ಲ ಸಾಹಸ ॥ ಕೊಲ್ಲುವೆನ್ನ ಸುಲಭವೇನು । ಖುಲ್ಲ ರಾಕ್ಷಸ ॥ ೫೩ ॥

ಮುಚ್ಚು ಬಾಯಿ ಅಂಬರೀಷ । ಕೆಚ್ಚಿನಾ ಯತಿ ॥ ಇಚ್ಛೆಯಿಂದ ಹುಟ್ಟಿ ಬಂದೆ । ಹುಚ್ಚು ಮಾತತಿ ॥ ೫೪ ॥

ಆಡಬೇಡ ಶಸ್ತ್ರದಿಂದ । ಆಡುವೀಕಣ ॥ ರೂಢಿಪಾಲ ಯೇಕೆ ಮಾನ್ಯ । ಮಾಡದಾತನ ॥ ೫೫ ॥

ನಿನ್ನ ಜನಕ ಹುಚ್ಚನಲ್ಲ । ಡಿನ್ನು ಮೋಸವೆ ॥ ಎನ್ನ ವ್ರತವ ಕೆಡಿಸಲೇಕೆ । ಮುನ್ನ ಬಾಣವ ॥ ೫೬ ॥

## ಮಾರವಿ – ಏಕ

ತೊಡು ತೊಡು ನೀನೆಂದೆನು ತಲೆ ರಕ್ಕಸ । ತುಡುಕಲು – ಭೂಮಿಪನು ॥ ಒಡನೆಯೆ ಪ್ರತಿ ಮಹ ಶರದೊಳು ದಾನವ । ನಡರಿದ ಮರಣವನು ॥ ೫೭ ॥ ರಕ್ಕಸನಸುವನು ರಸೆಯೊಳಗಿಡಲತಿ । ಫಕ್ಕನೆ ತಾಪಸನು ॥ ಸೊಕ್ಕುತಲೈತಂದಿದಿರೊಳು ನಿಲೆ ಮುನಿ । ಯುಕ್ಕುತ ಕಿಡಿಗಳನು ॥ ೫೮ ॥

## ವಾರ್ಧಿಕ

ಅನಲ ಮುಖ ದೂರ್ವಾಸ । ನನು ಕಂಡು ಭೂಪಾಲ । ಮನದೊಳಗೆ ಯೋಚಿಸಿದ । ನಿನಿತು ಋಷಿಗಳ ಕೂಡೆ । ಅನುವರವ ಗೈಯುವದು । ಸನುಮತವೆ ತಿಳಿದವಗೆ । ಯೆನುತವನ ಪದ ಕಮಲದಿ ॥
ಹಣೆಯಿರಿಸಿ ಸಮಚಿತ್ತ । ವನುಕರಿಸಿ ನುಡಿದ ನೆಲೆ । ಮುನಿಪ ನೀ ತಜ್ಞನಿಹೆ । ಅನುಗ್ರಹಿಸದನುವರಕೆ । ಘನಕ್ರೋಧವೆಳೆಸಿ ಬರ । ಲನುಚಿತವು ಋತವ ನರಿ । ದನಿತಂಗೆ ಮರಳು ಮುದದಿ ॥ ೫೯ ॥

## ರೂಪಕ

ದೈನ್ಯ ಭಾವವ ನಾಂತು । ಕ್ಷೋಣಿಪನುಸುರಿದ । ಮಾನ್ಯನೇ ನೀ ಯೆನ್ನ ಕೊಲಲು ॥ ಸೈನ್ಯವೇತಕೆ ಓರ್ವ ನೀ ಸಮರ್ಥನು ಎನಲು । ಶೂನ್ಯ ಜ್ಞಾನಿಯು ಕೇಳದಿರಲು ॥ ೬೦ ॥

## ಭಾಮಿನಿ

ಅಪಕೃತಿಯನೆಸಗಿಯೂ ತಿಳಿಯದಲೆ । ಉಪದೇಶ ಗೈಯುವೆಯ ನೀಚನೆ । ಶಪಿಸುವೆನು ನೋಡೆನಲಯೋಧ್ಯೆಯ । ನೃಪನು ಭಕ್ತಿಯಲಿ ॥ ಅಪರಿಮಿತ ನಯನ – ಶಿರ – ಚರಣವ । ನು ಪರಿಯೊಳಗಾಂತಿರುವ ಚಕ್ರಿಯ । ಜಪಿಸು ತೇಕಾದಶದ ಸಮಾಧಿ । ಯ ಪರಮ ಚಕ್ರದಲಿ ॥ ೬೧ ॥
ಚಕ್ರಿಸುವ ಮನವನು ಸಹಸ್ರಾರ । ಚಕ್ರದೊಳು ನೆಲೆಗೊಳಿಸಿ ಧ್ಯಾನದಿ । ಚಕ್ರಧಾರನ

ಪರಮ ಮೂರ್ತಿಯ । ಚಕ್ರಪತಿಕಂಡು ॥ ಚಕ್ರವಾರಿರುವ ದೇಹವನು ಸಿರಿ । ಚಕ್ರಾಂಕಿತಗೆ ತಾ ಸಮರ್ಪಿಸಿ । ಚಕ್ರ ಸ್ವಾಧೀನತೆಯ ಪಡೆದುರೆ । ಚಕ್ರ ಕೈಗೊಂಡು ॥ ೬೨ ॥

## ಸೌರಾಷ್ಟ್ರ – ತ್ರಿವುಡೆ

ಎಸೆದನಾ ಜನಪನು ಸುದರ್ಶನ । ಅಸಮ ಶಾಪದ ಯತಿಗೆ ಚಕ್ರವು । ಎಸಕದೊಳು ಬೆಂಬತ್ತಿ ಬಾಧಿಸೆ । ಋಷಿಯು ಸೋತು ॥ ೬೩ ॥

ಶರಣು ಬಂದಿಹೆನೆನ್ನ ಮನ್ನಿಸಿ । ಪೊರೆಯ ಬೇಹುದೆನುತ್ತಲೆರಗಿದ । ನರಸನಾ ಪಾದಾರವಿಂದಕೆ । ಶಿರವನಿಳಿಸಿ ॥ ೬೪ ॥

ಕ್ಷೇಮವೆ ಮುನಿ ಪುಂಗವಗೆ ಪರಿ । ಣಾಮವೇ ತವ ಮನಕೆ ಶ್ರೀ ಹರಿ । ನಾಮ ವ್ರತದೀ ಫಲವು ಸಾಕೇ । ಹೇ ಮಹಿಮನೆ ॥ ೬೫ ॥

## ರೂಪಕ

ಮನ್ನಿಸಯ್ಯ ರಾಜ ಶ್ರೇಷ್ಠನೆ । ನಮನ ಕ್ಷಾತ್ರತೇಜ ಸುಸಂ । ಪನ್ನನಯ್ಯಾ ಸದ್ಗುಣಾಢ್ಯನೇ ॥ ಪಲ್ಲ ॥ ಎನ್ನ ಕ್ರೋಧವೆನಗೆ ಮುಳಿಸದು ॥ ಹರಿಯ ಚಕ್ರ । ವನ್ನು ಕರುಣದಿಂದ ಕರೆವುದು ॥ ಸನ್ನುತಾಂಗ ಶಕ್ತಿ ಚಕ್ರ । ಬೆನ್ನನಟ್ಟಿ ಬಂದು ಭವಣಿ । ಯನ್ನು ನೀಡೆ ಸೋತೆನಿಂದು । ಇನ್ನು ಮೇಲೆ ಕ್ರೋಧವುಳಿಯದು । ಹೇ ದಯಾಳು । ಎನ್ನ ಜೀವವುಳಿಸಿ ಕಾವುದು ॥ ೬೬ ॥

## ರೂಪಕ

ಎನುತ ಬಿನ್ನಹ ಗೈದ ಮುನಿಪ ದೂರ್ವಾಸನ । ಸನಿಹ ಸುದರ್ಶನ ಧಾವಿಸಿರಲು ॥ ಜನಪ ನಾರಾಯಣನ ನೆನೆಯಲು ಶ್ರೀ ಚಕ್ರ । ಅನಿಲದಿ ಮಾಯವಾಗಿರಲು ॥ ೬೭ ॥

ಅಂಬರೀಷಗೆ ಪೇಳ್ದ । ನಂಬಿದ ಶ್ರೀ ವಿಷ್ಣು । ಬೆಂಬಲಿಸುತ ಸಂರಕ್ಷಿಪನು ॥ ಅಂಬುಜಾಕ್ಷನ ದಿವ್ಯ ಸನ್ನಿಧಿ ಸಿಗಲೆಂದು । ಹಂಬಲಿಸುತ ಮರಳಲವನು ॥ ೬೮ ॥

ಅಡವಿಯೊಳಗೈತಂದು ವರ ಸಮಾಧಿಯೊಳಿರ್ದು । ಮೃಡನ ಧ್ಯಾನದಿ ಮಗ್ನನೈಸೆ

॥ ಜಡರುಹ ಭವ ಕಲ್ಪ ಹಲವಾರು ಕಳೆಯಲು । ಪುಡವಿಯೊಳ್ ತ್ರೇತೆಯಾಗಮಿಸೆ ॥ ೬೯ ॥

### ಅಷ್ಟತಾಳ

ವರ ವಸುಂಧರೆಯನ್ನು ಸಾಕೇತದೊಳು ರಘು । ವರನು ಪ್ರಜೆಗಳನೆಲ್ಲ ಸಲಹಿ ॥ ದುರುಳರ ಸಂಹರಿಸಿ ವರುಷ ಸಾವಿರ ಗತಿಸಿ । ಪರಮ ವೈಭವದೊಳಿರಲು ಮಹಿ ॥ ೭೦ ॥

ಸುರರ ಮಾರಿನಳೊಂದು ಪುರುಷ ಕಾಲನು ಬಂದು । ಪುರುಷೋತ್ತಮನ ಎಚ್ಚರಿಸಿರಲು ॥ ಮರೆಯ ಮಾತುಗಳಾಡುತ್ತಿರಲು ರಾಘವನಂದು । ತರಳ ಲಕ್ಷ್ಮಣ ಕಾಯುತ್ತಿರಲು ॥ ೭೧ ॥

### ಸೌರಾಷ್ಟ್ರ – ತ್ರಿವುಡೆ

ಇತ್ತಲಾ ದೂರ್ವಾಸ ತಾನೆ । ಚ್ಚೆತ್ತು ಕಂಗಳ ತಿರುಹಿ ಧರೆಯನು । ಸುತ್ತ ನೋಡುತತಿದ್ದು ದಂಡವ । ನೆತ್ತಿ ಬರುತ ॥ ೭೨ ॥

ಹಂಬಲಿಸಿ ರಾಘವನ ಸರಯೂ । ಅಂಬು ನಿಧಿ ತೀರದೊಳು ನೆಲೆಸಿಹ । ಸಂಭ್ರಮದ ಸಾಕೇತದೊಳು ತಾ । ನುಂಬ ನೆನಹ ॥ ೭೩ ॥

ಜವದಿ ಧಾವಿಸೆ ರಘುವರನ ಪುರ । ಕವನು ದ್ವಾರದಿ ತಡೆಯೆನಿಲದುರೆ । ಅವನಿಜಾ ರಮಣನು ಕೇಳುತ । ಜವನ ಮುಖನು ॥ ೭೪ ॥

ರಾಜಧಾನಿಯೊಳಂತರಂಗವ । ವಾಚಿಸುವ ಗ್ರಹದೊಳಗೆ ರಾಮನು । ತಾ ಜವನ ರೂಪನೊಳಗಾಡುವ । ಸೋಜಿಗದೊಳು ॥ ೭೫ ॥

### ಅಷ್ಟತಾಳ

ಇರುವ ಸಮಯದೊಳಲ್ಲಿ ದೂರ್ವಾಸನೈತಂದು । ತರಳ ಲಕ್ಷ್ಮಣನ ನೋಡಿ ॥ ಅರಸ ರಾಘವನೆಲ್ಲಿ ತೋರಿಸೀಕ್ಷಣವೆಂದು । ಅರುಹೆ ವಂದನೆಯ ಮಾಡಿ ॥ ೭೬ ॥

### ರೂಪಕ

ವರ ತಪೋಧನ ಕೇಳು । ಸರಸಿಜನೇತ್ರನು ಸುರ । ಪುರದ ದೂತನ ಸಮ್ಮಿಲನಕೆ

॥ ತೆರಳಿಹನ್ನೆಸೆ ನೀ । ಪರಮ ಜ್ಞಾನಿಯು ಕ್ಷಣ । ವಿರಮಿಸೆ ಬರುವ ದರ್ಶನಕೆ ॥ ೭೭ ॥

## ಝಂಪೆ

ಹುಡುಗನೇ ಬಾಗಿಲೊಳು । ತಡೆದೆನ್ನ ಕೆಣಕುವೆಯ । ಒಡನೆ ಬಿಡು ಶ್ರೀ ರಾಮನೊಡನೆ ॥ ಸಡಗರದ ಮಾತುಂಟು । ಒಡಲ ಕಿಚ್ಚನು ಬರಿದೆ ತುಡುಕದಿರು ನುಡಿವೆ ಲಕ್ಷ್ಮಣನೇ ॥ ೭೮ ॥

## ಅಷ್ಟತಾಳ

ದಾಶರಥಿಯಾಜ್ಞೆಯ ನೇಮದೊಳಿರ್ಪೆನು । ಭೂಸುರೋತ್ತಮ ರೋಷವ ॥ ಏಸು ಗೈದರೂ ರಾಮ ಕಾಣದಂದದೊಳಿರುವ । ಭಾಸುರಾಂಗನೆ ತಾಳಯ್ಯ ॥ ೭೯ ॥

## ಸುರಟಿ – ಏಕತಾಳ

ನೇಮವು ಎಮಗಿಲ್ಲ । ಬೇಗದಿ । ರಾಮನ ಕಾಣಿಸೆಲ ॥ ಆ ಮಹಿಮನಿದಿರು ನೀನೆಷ್ಟರವನು । ಹೋಮಿಸುವೆನು ತವ । ತಾಮಸರಿಪುಕುಲ ॥ ೮೦ ॥

## ಭಾಮಿನಿ

ವೃಷ್ಟಿಯೊಂದರ ಕಾರಣಕೆ ಸ । ಮಷ್ಟಿ ಹನನವು ಆಪುದುಚಿತವೆ । ದುಷ್ಟ ನಾನಾದಡಾಗಲಿ ಮುನಿ । ಕೆಟ್ಟ ಛಲದವನ ॥ ಬಿಟ್ಟರೀಗಲೆ ಶಿಕ್ಷೆಯನಗಿರೆ । ಶ್ರೇಷ್ಠ ರಾಘವನಿಂದ ಪಡೆದುರೆ । ಬಿಟ್ಟು ಪೋಪೆನು ನಾಡನೆನುತಲಿ । ಯೋಚಿಸೆ ಲಕ್ಷ್ಮಣ ॥ ೮೧ ॥

ರಾಘವನ ಬಳಿಗವನ ಕರೆತರೆ । ಹೋಗವನ ಸಿರಿಯವನ ಜಾಂಘ್ರಿಗೆ । ತಾಗಿವನ ಶಿರವನಾ ರಾಮನ । ನೋಡಿದನು ಬಳಿಕ ॥ ಆಗವನ ತಾಪವನಜಾಪ್ತನು । ವಾಗೆ ವನಜಾಕ್ಷನವವಿದರಂತೇಗುವನ ಕಂಡಿವನ ಕರೆದುರೆ । ಶಿಕ್ಷೆ ಕೊಡಲನಕ ॥ ೮೨ ॥

ಜಾರಿದನು ಕಾಲ ಮುನಿಯಾಗಲೆ । ಸಾರಿ ಸಂತೃಪ್ತಿಯಲಿ ಲಕ್ಷ್ಮಣ । ಗಾರರಿಯ ದಂಡದಲಿ ಮರಣಕೆ । ಕಾರಣನುಯೆನಿಸಿ ॥ ಘೋರ ತಪದಲಿ ಮತ್ತೆ

ತೊಡಗಿರೆ । ಜಾರಿ ಯುಗಗಳು ಮರಳಿ ಧರಣಿಗೆ । ಸಾರಿದುದು ದ್ವಾಪರೆಯು ಕುರುಕುಲ । ವಾರಿಯು ಪ್ರವಹಿಸಿ ॥ ೮೩ ॥

## ಅಷ್ಟತಾಳ

ಮಿಂಚಿನಂದೊಳೆದದ್ದು ದೂರ್ವಾಸನೈತಂದು । ಮುಂಚೆಯೇ ಕುಂತಿಯಾ ತಿಥ್ಯದಲಿ ॥ ಪಂಚ ವರಗಳ ನೀಡಿ ಪಾಂಡವರ ಜನನಕ್ಕೆ । ವಿ । ರಂಚಿಯಾದನು ಬಳಿಕಲ್ಲಿ ॥ ೮೪ ॥ ಸಂಚಿತ ಪಾಪ ಕಾರಣ ಕೌರವನು । ಸಂಚು ಹೂಡುತಲತ್ರೀ ಮಗನ ॥ ಹಂಚಲು ದ್ವೇಷವ ಕರೆಸಿ ಕಾಮ್ಯಕ ವನ । ದಂಬಿ ಗೈದುತ ಕೇಳ್ವುದನ್ನ ॥ ೮೫ ॥

## ಸೌರಾಷ್ಟ್ರ – ತ್ರಿವುಡೆ

ಎಂದೆನಲು ದೂರ್ವಾಸನುಬ್ಬುತ । ಬಂದನಾಗಲೇ ವನಕೆ ಪಾಂಡವ । ನಂದನರ ಬಳಿಗೈದಿ ಕೆಣಕುವಾ । ನಂದದೊಳಗೆ ॥ ೮೬ ॥

## ಝಂಪೆ

ಸೂರ್ಯನಿತ್ತಕ್ಷಯದ ಪಾತ್ರೆಯೊಳು ಪಾಂಡವರು । ಧೈರ್ಯದಿಂ ವನದಿ ಬದುಕುತಿರಲು ॥ ಕ್ರೌರ್ಯ ಮುನಿಯಪರಾಹ್ನ ಕಾಲದೊಳಗೈತಂದು । ಶೌರಿಗಳೇ ಕೊಡಿರನ್ನವೆನಲು ॥ ೮೭ ॥

ಧರ್ಮನಂದನ ಪೇಳ್ದ ಬ್ರಾಹ್ಮಣರು ನೀವಿಂದು । ಧರ್ಮವೇ ಇಲ್ಲಿ ಕೇಳುವುದು ॥ ಕರ್ಮವಿಧಿ ಮುಗಿಸಿ ಬರಲನ್ನವನು ನೀಡ್ವೆವೆನೆ । ಬ್ರಹ್ಮಜ್ಞರಾಗ ನದಿಗೈದು ॥ ೮೮ ॥

ದೊರಕಿದವಕಾಶದೊಳು ಹರಿಯ ನೆನೆಯಲು ಬಂದು । ಇರಲಗುಳ ತಿಂದು ತೇಗಿದುದಕೆ ॥ ವರಯತಿಗಳಿರುವಲ್ಲೇ ಉದರ ತುಂಬಲಿಕೆಲ್ಲ । ತೆರಳಿದರು ಬಳಿಕಾಗ ತಪಕೆ ॥ ೮೯ ॥

## ರೂಪಕ

ಕೆಲವು ಕಾಲ ತಪದೊಳಿರ್ದು । ಘಳಿಲನೈದು ದ್ವಾರಕೆಯೊಳು ॥ ಬಲನು ಇರದ ಸಮಯವರಿತು । ಬಲುಹ ಕಾಣಿಸಲು ಹರಿಯೊಳು ॥ ೯೦ ॥

## ಝಂಪೆ

ನಗಧರನು ನಸುನಗುತ । ನಗರ ದ್ವಾರಕೆಯೊಳಗೆ । ರುಗುಮಿಣಿಯು ಸಹಿತ ವೈಭವದಿ ॥ ಸೊಗಸಿನೊಳಗಿರಲತ್ತ । ವಿಗಡ ಮುನಿ ದೂರ್ವಾಸ । ಬಗೆಯರಿತು ತಾ ಬಂದ ಭರದಿ ॥ ೯೧ ॥

ಶ್ಯಾಮಸುಂದರ ಹರಿಯು । ಕಾಮಿನಿಯು ಸಹಿತೈದು । ಆ ಮಹಿಮ ನನ್ನಿದಿರು ಗೊಳುತ ॥ ಭೂಮಿ ಸುರನನು ಕರೆದು ತಂದು ಭವನದೊಳಿರುವ । ಹೇಮ ದಾಸನವಿತ್ತು ನುಡಿದ ॥ ೯೨ ॥

## ಅಷ್ಟತಾಳ

ದೂರದಿಂದಲಿ ಸ್ವಾರಿ ಚಿತ್ತವಿಸಿತಪರೂಪ । ಕಾರಣವ ಕೇಳಬಹುದೇ ॥ ಭೂರಿ ಸಂತಸವಾಯ್ತು ಆಗಮದಿಂದೆಮಗೆ । ಆರಾಮವೇ ತಮಗಿಹುದೇ ॥ ೯೩ ॥

## ಸುರಟಿ – ಏಕತಾಳ

ಯಮ ನಿಯಮಂಗಳನು । ಅರಿತಿಳೆ । ಸುಮನಸ ರಂಗಕನು ॥ ಶಮನವು ನೀ ಹದಿನಾರು ಸಹಸ್ರದ । ರಮಣಿಯರಿಗೆ ಪತಿ ಕ್ಷೇಮವೇ ಕೇಳ್ವೆನು ॥ ೯೪ ॥

## ಅಷ್ಟತಾಳ

ಇಚ್ಛೆಯರಿಯುವ ಪತ್ನಿ । ಬೆಚ್ಚಗಿನಾಲಯ । ವೆಚ್ಚಕಕ್ಷಯವಿತ್ತವಿರಲು ॥ ಕಿಚ್ಚದು ನಾಕಕೆ । ಹಚ್ಚದರೇನಂತೆ । ಹೆಚ್ಚು ಮಾತುಗಳಲ್ಲವೆನಲು ॥ ೯೫ ॥

## ಸುರಟಿ – ಏಕತಾಳ

ನಿಲ್ಲಲು ನೆಲೆಯಿರದು । ದ್ರವ್ಯಗ । ಳೆಲ್ಲವು ರಾಜನದು ॥ ಸೊಲ್ಲುಗಳೇತಕೆ ಸಂನ್ಯಾಸಿಗೆ ಶ್ರೀ । ವಲ್ಲಭ ಹಸಿವಿಗೆ ಊಟವ ನೀಡ್ವುದು ॥ ೯೬ ॥

## ಅಷ್ಟತಾಳ

ಹಾಯಾಗಿ ಕ್ಷುಧೆಯನೀ ನೀಗಿ ಪೋಪುದು ಕೊಡುವೆ । ಪಾಯಸದೂಟವನ್ನು ॥ ತಾ ಯಮ ಕಾಯುವನು ಅವಸರವೇತಕೆ । ಮಾಯೆ ಜಗ ಬಲ್ಲೆಯೇನು ॥ ೯೭ ॥

## ಭಾಮಿನಿ

ರಾಜಿಸುವ ಹರಿ ಸತಿಯು ಸಹಿತಲಿ । ಭೋಜನಾಲಯಕ್ಕೈದು ಮೂವರೂ । ಓಜೆಯಿಂದುಣಬಡಿಸೆ ಪರಿಕಿಸ । ಲಾ ಜವವದನನು ॥ ತೇಜದೊಳು ಪಾಯಸದ ಬಟ್ಟಲ । ವಾ ಜನೋತ್ತಮ ರುಕ್ಮಿಣಿಯ ಶಿರ । ಕಾ ಜುಣುಗ ಜರಿಯಲ್ಕೆ ದಂಪತಿ । ಸೋಜಿಗದಲಿರಲು ॥ ೯೮ ॥

## ಝಂಪೆ

ಸಿಹಿಯ ಪರಮಾನ್ನವನು । ಎಂಜಲೆಂದರಿಯದೆಯೇ । ಮಹಿಮನಿಡಿ ತನುವ ಸೂಸುತಲಿ ॥ ಅಹಿಶಯನ ನಗುವುದನು ಕಂಡು ದೂರ್ವಾಸ ಮುನಿ । ಗಹಗಹಿಸುತೆಂದ ಕೃಷ್ಣನಲಿ ॥ ೯೯ ॥

## ಮಟ್ಟೆ ತಾಳ

ಎಲೆ ಮುರಾರಿ ನಗುತಲೆನ್ನ । ಬಲವ ಹಂಗಿಸಿ ॥ ಕಳೆದೆ ಮಾನಯೆನುತ ಕೋಪ । ತಳೆದು ಭಂಗಿಸಿ ॥ ೧೦೦ ॥

## ಅಷ್ಟ ತಾಳ

ಭಸ್ಮಧಾರಿಯ ಮುಳಿಸ ಕಂಡು ರುಕ್ಮಿಣಿ ತಾನು । ವಿಸ್ಮಯಂಗೊಳುತ್ತಲವಳು ॥ ಕಶ್ಮಲವಲ್ಲ ವರ ಪ್ರಸಾದವದು ತಿಳಿಯೆ । ಧರ್ಮ ಸೂಕ್ಷ್ಮವನರಿವು ದೆಂದಳು ॥ ೧೦೧ ॥

## ಮಾರವಿ ಏಕ

ಅಂಗನೆ ನೀ ಕೇಳಂಗಜ ಪಿತ ತಾ । ನಂಗಾಲನು ಬಿಟ್ಟು ॥ ಉಂಗುಟವರೆಗದ ಶೀಡಿಹನದರಲಿ । ರಂಗನರಿವ ಗುಟ್ಟು ॥ ೧೦೨ ॥

## ಝಂಪೆ

ಹಿರಿಯರುಚ್ಚಿಷ್ಟವನು । ಪರಮ ಗಂಗೋದಕವ । ಪುರುಷ ಸೂಕ್ತದಿ ಗೈದ ತೀರ್ಥ ॥ ವರ ಪ್ರಸಾದವನೆಲ್ಲ ಶಿರಕಿಡುವುದಲ್ಲದಲೇ । ಸರಿಸುವರೆ ಕಾಲಡಿಗೆ ವ್ಯರ್ಥ ॥ ೧೦೩ ॥

## ಮಾರವಿ ಏಕ

ಮದನನ ಪಿತನಿಗೆ । ಮದವೆಷ್ಟರದದು । ಅದಕೆಂದೆನೆ ಕೋಪ ॥ ವಿಧಿ ಬರೆದಿಹ ತೆರವೊದಗಿತು ನೀ ತಿಳಿ । ವುದು ನೀಡುವೆ ಶಾಪ ॥ ೧೦೪ ॥
ಹಿಡಿದು ಕಮಂಡಲ ಜಲ ತೂರುತ ಪದ । ದಡಿಯಲಿ ಬರೆಮರಣ ॥ ನುಡಿದುರೆ ಶಾಪವ ಒಡನತಿವೇಗದಿ । ಸಿಡಿಯಲು ಶ್ರೀ ರಮಣ ॥ ೧೦೫ ॥

## ದ್ವಿಪದಿ

ದಿಟ್ಟ ಮುನಿ ದೂರ್ವಾಸ । ದೂರ ಪೋದುದನು ॥ ದೃಷ್ಟಿಯಲಿ ನಗೆ ಸೂಸಿ । ಕೃಷ್ಣ ನೋಡಿದನು ॥ ೧೦೬ ॥
ವಲ್ಲಭನ ಕಿರುನಗೆಯ । ರುಕ್ಮಿಣಿಯು ನೋಡಿ ॥ ಲಲ್ಲೆಯಲಿ ಮೈದಡವಿ । ಕಾಂತನೊಳು ಆಡಿ ॥ ೧೦೭ ॥
ಭಾರ್ಯೆ ದುಃಖದೊಳವನ । ಕರೆದು ಮಾತಾಡಿ ॥ ಕ್ರೌರ್ಯ ಮುನಿ ವಚನವನು । ತಿರುಗಿಸಲು ಬೇಡಿ ॥ ೧೦೮ ॥

## ಕೇದಾರ ಗೌಳ – ಝಂಪೆ

ಕಾಂತ ಕೇಳೆನ್ನ ನುಡಿಯ । ನೀವೇಕೆ । ಭ್ರಾಂತಿಯಲಿ ನಿಂತು ನಗೆಯ ॥ ಆಂತುದೇಕೆನಗೆ ಇನಿಯ । ಪೇಳೆನಲು । ಸಾಂತ್ವನಿಸಿ ತನ್ನ ಸತಿಯ ॥ ೧೦೯ ॥

## ಝಂಪೆ

ಬಿಗಿದಪ್ಪಿ ರಮಣಿಯನು ಸೆರಗಿನಂಚಿನೊಳವಳ । ದೃಗು ಜಲವನೊರೆಸುತ್ತ ಕೃಷ್ಣ ॥ ಬಗೆಯರಿತು ನೋಡಿದರೆ ಬದುಕು ಋಣ ಬಂಧನವು । ಹಗಲು ನಿಶಿಯಲಿ ಜನನ – ಮರಣ ॥ ೧೧೦ ॥

## ಕೇದಾರ ಗೌಳ – ಝಂಪೆ

ಒರೆದ ನುಡಿಯಲ್ಲಿ ಸರಸ । ತರದಿಹುದೆ । ಚಿರ ನಿದ್ರೆ ಮೃತ್ಯು ವಿರಸ ॥ ಮರು ಜನ್ಮದೊಳ್ ಪಾಯಸ । ರಾಮನಿಗೆ । ಮರಣವದು ನಿನಗೆ ಅರಸ ॥ ೧೧೧ ॥

## ಝಂಪೆ

ಕುಂಕುಮಾಂಕಿತೆ ಕೇಳು ಪಂಕಭವ ಜಾತಲಿಪಿ । ಯಂಕೆಯಲ್ಲದೆ ಇಹುದೇ ಬೇರೆ ॥ ಶಂಕರನ ತಾಂಡವವು । ಶಂಕು ಪೂರ್ವಾರ್ಜಿತವು । ಮಂಕುಮನ ಕಾರಣವು ಇದಕೆ ನೀರೆ ॥ ೧೧೨ ॥

## ಕೇದಾರ ಗೌಳ – ಝಂಪೆ

ಸಮರಸದ ಜೀವನವನು । ಕಳೆಯಲ್ಕೆ । ಮಮತೆಯೊಳ್ ಬಯಸಿ ನಾನು ॥ ರಮಣತವಕರ ಪಿಡಿದೆನು । ದೂರ್ವಾಸ । ಗಮನವೇಕೆಂದರಿಯೆನು ॥ ೧೧೩ ॥


## ಝಂಪೆ

ಬೇಸರಿಸಬೇಡೆನುತ ಕಳೆಯೆ ಸಂತಾಪದೊಳು । ನೇಸರನು ಮೂಡಿ ಪೂರ್ವದಲಿ ॥ ತಾ ಶುಭೋದಯವು ಜಗಕಾವರಿಸಿ ಗೋಕರುಗ । ಳಾಶಯನ ಮೈಯ ಮುರಿವುತಲಿ ॥ ೧೧೪ ॥

## ಅಷ್ಟತಾಳ

ನಿಂತು ಹಸಿವೆಯೊಳಂಬಾ ಎಂದು ಕಪಿಲೆಯ ಕರೆಯೆ । ಅಂತು ಕೆಚ್ಚಲ ಕ್ಷೀರ ನಿಧಿಯನು ಸುರಿಸಿ ॥ ಸಂತೈಸೆ ಖಗಗಳು ಚಿಲಿಪಿಲಿ ಸ್ವರ ಗೈಯೆ । ಕಂತು ಕಾಮಿನಿಯರು ಕಡಗೋಲ ಸರಿಸಿ ॥ ೧೧೫ ॥

ದಧಿಯ ಮಂಥನದಲಿ ನವನೀತದುಂಡೆಯ । ಮೃದು ಹಸ್ತದೊಳಗಿರಿಸಿ ಹಾರಿಸಿ ಇಡಲು ॥ ಪದುಮನಾಭನ ಸ್ತುತಿಸಿ । ಜನರೆದ್ದು ದಿನಚರಿ । ಪೊದಗಿ ಸೇವೆಗೆ ಮತ್ತೆ ಮಗ್ನರಾಗಿರಲು ॥ ೧೧೬ ॥



ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವವು ಪ್ರಸಂಗ ಕೃತಿಗಳು. ಕನ್ನಡ ಸಾಹಿತ್ಯ ನಂದನದಲ್ಲಿ ವಿಕಸನಗೊಂಡ ವಿವಿಧ ಛಂದೋ ಕುಸುಮಗಳ ಗ್ರಂಥದಿಂದ ಸಿದ್ಧಗೊಂಡ ಅನುಪಮ ಕಾವ್ಯಗಳು ಇವು. ಅಲ್ಲಿನ ಪದ್ಯಗಳ ಚೌಕಟ್ಟಿನಲ್ಲಿಯೇ ಆಶುಸಂಭಾಷಣೆಗಳು ನಡೆಯುತ್ತವೆ. ಆಶುಸಂಭಾಷಣೆಗೆ ಸೀಮಾರೇಖೆಯನ್ನೆಳೆದು ಕಥಾಪ್ರವಾಹದ ಗತಿಯನ್ನು ನಿಯಂತ್ರಿಸುವ ಕಾರ್ಯ ಅವುಗಳದು. ಉತ್ತಮವಾದ ಪ್ರಸಂಗ ಕಾವ್ಯ ರಚನೆಯು ಕವಿಯ ಪ್ರತಿಭೆ ಪಾಂಡಿತ್ಯಗಳಿಗೆ ನಿಕಷವೆನಿಸುತ್ತದೆ.

ಪ್ರಸ್ತುತ ಸಂಕಲನವು ಯಕ್ಷಗಾನದ ಸಮಕಾಲೀನ ಕವಿಗಳಲ್ಲೊಬ್ಬರಾದ ಜಿ. ಎಂ. ಭಟ್ಟ, ವಾಜಗಾರ ಅವರ ಐದು ಪ್ರಸಂಗಗಳನ್ನೊಳಗೊಂಡಿದೆ. ಅವರು ಅನೇಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರಾದರೂ ಪ್ರಕಟಿತ ಕೃತಿಗಳು ಕಡಿಮೆ. ಸುದೀರ್ಘಕಾಲದಿಂದ ಯಕ್ಷಗಾನ ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡು ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುತ್ತಿರುವ ಅವರ ಕೆಲವು ಕೃತಿಗಳನ್ನು ಪ್ರಕಟಿಸುವ ಮೂಲಕ ನಿಸ್ವಾರ್ಥ ಸೇವೆಗೆ ಗೌರವವನ್ನು ಸಲ್ಲಿಸಿದಂತೆಂದು ತಿಳಿದಿದ್ದೇವೆ.

**ಪ್ರೊ॥ ಎಂ. ಎ. ಹೆಗಡೆ**
(ಅಧ್ಯಕ್ಷರ ಮಾತು)

